2016 ಕ.ತೀ.ವ. 656

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ

ಸಂತೋಷ್ ಮತ್ತು ಇತರರು –ವಿರುದ್ಧ– ಕರ್ನಾಟಕ ಸರ್ಕಾರ,
ಶಹಬಾದ್ ಪಟ್ಟಣ ಪೊಲೀಸು ಠಾಣೆ, ಗುಲ್ಬರ್ಗಾ ಜಿಲ್ಲೆ*

ದಂಡ ಪ್ರಕ್ರಿಯಾ ಸಂಹಿತೆ ಕಲಂ 374ರಡಿಯಲ್ಲಿ ಕ್ರಿಮಿನಲ್ ಮೇಲ್ಮನವಿ.

ಐಪಿಸಿ ಸೆಕ್ಷನ್ 323, 324, 304(I), 34.

ಮೇಲ್ಮನವಿದಾರರನ್ನು ಭಾರತ ದಂಡ ಸಂಹಿತೆ ಕಲಂ 34ರ ಜೊತೆಗೋದಿದಂತೆ ಕಲಂ 323 ಹಾಗೂ 304–I ರಡಿಯಲ್ಲಿ 7ವರ್ಷ ಕಠಿಣ ಸಜೆಯೊಂದಿಗೆ ಶಿಕ್ಷಿಸುವಂತೆ ನೀಡಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಮೇಲ್ಮನವಿ.

ಪ್ರಾಸಿಕ್ಯೂಷನ್ ಅಧಿವಿಚಾರಣಾ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಸಾಕ್ಷ್ಯಾಧಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಉಚ್ಚ ನ್ಯಾಯಾಲಯವು ಕೊಲೆಯಾದ ವ್ಯಕ್ತಿಯು ತನ್ನ ಮನೆಯಲ್ಲಿ ಸಾವನ್ನಪ್ಪಿರುವನೆಂದು ಸಾಬೀತು ಪಡಿಸುತ್ತದೆ. ಹತ್ಯೆಗೊಳಪಟ್ಟ ವ್ಯಕ್ತಿಯ ಮೇಲಿನ ಹಲ್ಲೆಯಿಂದ ಯಾವುದೇ ಬಾಹ್ಯ ಅಥವಾ ಆಂತರಿಕ ಗಾಯಗಳಾಗಿಲ್ಲ. ಹೀಗಾಗಿ ಆ ಹಲ್ಲೆಯು ನರತಂತುಗಳ ಆಘಾತ ಅಥವಾ ಟ್ರಾಮಾಕ್ಕೆ ಕಾರಣವಾಯಿತೆಂದು ಪರಿಗಣಿಸಲಾಗದು. ಅಧಿವಿಚಾರಣಾ ನ್ಯಾಯಾಲಯವು ಮೇಲ್ಮನವಿದಾರರನ್ನು ಭಾರತ ದಂಡ ಸಂಹಿತೆ ಕಲಂ 304–I ರಡಿಯಲ್ಲಿ ಶಿಕ್ಷಿಸಿರುವ

* ಕ್ರಿಮಿನಲ್ ಅಪೀಲು ಸಂಖ್ಯೆ: 3676/2010, ದಿನಾಂಕ: 12ನೇ ಆಗಸ್ಟ್, 2015.

**ಕ್ರಮ ನ್ಯಾಯ ಸಮ್ಮತವಲ್ಲ. ಆದರೆ ಭಾರತ ದಂಡ ಸಂಹಿತೆ ಕಲಂ 324, 341, 504 ಹಾಗೂ 302ರಡಿಯಲ್ಲಿ ಶಿಕ್ಷಿಸಿರುವ ಕ್ರಮವನ್ನು ಎತ್ತಿ ಹಿಡಿದ ಉಚ್ಚ ನ್ಯಾಯಾಲಯವು ಅಧಿವಿಚಾರಣಾ ನ್ಯಾಯಾಲಯದ ಆದೇಶವನ್ನು ಮಾರ್ಪಡಿಸಿ ಸದರಿ ಮೇಲ್ಮನವಿಯನ್ನು ವಿಲೇಖಿಸಲಾಗಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
|---|---|
| *1. [2012] 2 ಅಪರಾಧಗಳು 73 (ಎಸ್‌ಸಿ) ರಾಜಸ್ಥಾನ ರಾಜ್ಯ -ವಿರುದ್ಧ- ಮೋಹನ್‌ಲಾಲ್ ಹಾಗೂ ಇತರ 7 ಜನರು* | *(ಉಲ್ಲೇ) 5* |
| *2. (2015)4 ಎಸ್‌ಸಿಸಿ 387 ಸಂಜೀವ್ -ವಿರುದ್ಧ- ಹರಿಯಾಣ ರಾಜ್ಯ* | *(ಉಲ್ಲೇ) 6* |
| *3. [1999] 2 ಎಸ್‌ಸಿಸಿ 428 ಮೋಹನ್ ಸಿಂಗ್ ಹಾಗೂ ಮತ್ತೊಬ್ಬರು -ವಿರುದ್ಧ- ಮಧ್ಯಪ್ರದೇಶ ರಾಜ್ಯ* | *(ಉಲ್ಲೇ) 6* |
| *4. 1982 ಕ್ರಿಮಿನಲ್ ಎಲ್.ಜೆ. 82 (ಎಸ್‌ಸಿ) ಮಯೂರ್ ಪಿ. ಷಾ -ವಿರುದ್ಧ- ಗುಜರಾತ್ ರಾಜ್ಯ* | *(ಉಲ್ಲೇ) 16* |
| *5. ಎಐಆರ್ 2004 ಎಸ್‌ಸಿಡಬ್ಲ್ಯು 1244 ಚೆಂಕು -ವಿರುದ್ಧ- ಕೇರಳ ರಾಜ್ಯ* | *(ಉಲ್ಲೇ) 23* |

ಅರ್ಜಿದಾರರ ಪರ : ಶ್ರೀ ಬಾಬುರಾವ್ ಮಂಗಾನೆ ಹಾಗೂ
ಅಶೋಕ್ ಬಿ. ಮುಳಗೆ ವಕೀಲರು.
ಪ್ರತ್ಯಪೀಲುದಾರರ ಪರ : ಶ್ರೀ ಶೇಷಾದ್ರಿ ಜಯಶಂಕರ್ ಎಂ. ಎಚ್.ಸಿ.ಜಿ.ಪಿ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ:**

ಈ ಅಪೀಲನ್ನು ಎಸ್.ಸಿ. 222/09ರಲ್ಲಿ ಹೊರಡಿಸಿದ ಅಪರಾಧ ನಿರ್ಣಯದ ತೀರ್ಪು ಹಾಗೂ ಶಿಕ್ಷೆಯನ್ನು ಪ್ರಶ್ನಿಸಿ ದಂಡಪ್ರಕ್ರಿಯಾ ಸಂಹಿತೆಯ 374ನೇ ಪ್ರಕರಣದ ಮೇರೆಗೆ ಹೂಡಲಾಗಿದ್ದು, ಇದು ಕಲ್ಬುರ್ಗಿಯ IIIನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ಕಡತದಲ್ಲಿ ಇತ್ಯರ್ಥದಲ್ಲಿತ್ತು. ಈ ಅಪೀಲು ಇತ್ಯರ್ಥದಲ್ಲಿರುವ ಅವಧಿಯಲ್ಲಿ 3ನೇ ಅಪೀಲುದಾರನು ಮೃತನಾದ ಕಾರಣದಿಂದ ಅವನ ವಿರುದ್ಧ ಅಪೀಲನ್ನು ಕೊನೆಗೊಳಿಸಲಾಗಿದೆ.

2. ಈ ಅಪೀಲುದಾರರು, ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 323, 324, 341, 504, 302ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಈ ಮೊದಲು ಆಪಾದಿತರಾಗಿದ್ದರು. ಅಂತಿಮವಾಗಿ ಅವರೆಲ್ಲರೂ, ಭಾರತ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 323 ಮತ್ತು 304–Iನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಲ್ಲಿ ಅಪರಾಧಿಗಳೆಂದು ಕಂಡು ಬಂದಿದ್ದರು, ಹಾಗೂ 304–ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಪ್ರತಿಯೊಬ್ಬರಿಗೆ 7 ವರ್ಷಗಳ ಅವಧಿಯ ಕಠಿಣ ಕಾರಾವಾಸ ಶಿಕ್ಷೆಗೆ ಹಾಗೂ 10,000/– ರೂ. ಜುಲ್ಮಾನೆಯನ್ನು ಸಂದಾಯ ಮಾಡುವ ಶಿಕ್ಷೆಗೆ ಹಾಗೂ ಭಾರತೀಯ ದಂಡ ಸಂಹಿತೆಯ 323ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಪ್ರತಿಯೊಬ್ಬರಿಗೆ 1,000/– ರೂ.ಗಳ ಜುಲ್ಮಾನೆ ಸಂದಾಯ ಮಾಡುವ ಹಾಗೂ 2 ತಿಂಗಳ ಸಾದಾ ಶಿಕ್ಷೆಗೆ ಒಳಗಾಗಿದ್ದರು. ಇದು ಅಪೀಲು ಮೆಮೋದಲ್ಲಿ ರೂಪಿಸಲಾದಂಥ ಬೇರೆ ಬೇರೆ ಆಧಾರಗಳ ಮೇಲೆ ಈ ಅಪೀಲಿನಲ್ಲಿ ಪ್ರಶ್ನಿತವೆಂದು ಕರೆಯಲಾಗಿರುವ ದಿನಾಂಕ 3.8.2010ರ ಅಪರಾಧ ನಿರ್ಣಯ ಹಾಗೂ ಶಿಕ್ಷೆಯ ತೀರ್ಪಾಗಿದೆ.

3. ಎಸ್.ಸಿ. 222/09ರಲ್ಲಿನ ಅಧಿವಿಚಾರಣೆಗೆ ಕಾರಣವಾದ ಸಂಗತಿಗಳು ಈ ಮುಂದಿನಂತಿವೆ:

(ಎ) ಪ್ರಾಸಿಕ್ಯೂಷನ್ ಸಾಕ್ಷ್ಯ – 3 ಎಂದು ವಿಚಾರಣೆ ಮಾಡಲಾಗಿರುವ ಕ್ರಿಮಿನಲ್ ಸಾಕ್ಷ್ಯ–1, ಶಬೀರ್ ಅಹ್ಮದ್ ಕಲಬುರಗಿ ಜಿಲ್ಲೆಯ ಶಹಬಾದ್‌ನಲ್ಲಿರುವ ಆಲ್‌ಸ್ಟಮ್ ಕಾಲೋನಿಯ ವಸತಿ ಸಮುಚ್ಚಯದಲ್ಲಿ ವಾಸವಾಗಿದ್ದರು. ಅವರ ಇಬ್ಬರು ಮಕ್ಕಳ ಹೆಸರು ಸಜೀದ್ ಅಹ್ಮದ್ ಹಾಗೂ ಜಾವೆದ್ ಅಹ್ಮದ್.

(ಬಿ) ದಿನಾಂಕ 7.12.2008ರ ರಾತ್ರಿ ಸದರಿ ಶಬೀರ್ ಅಹ್ಮದ್ ತನ್ನ ಮನೆಯಲ್ಲಿದ್ದಾಗ, ಸುಮಾರು ರಾತ್ರಿ 9 ಗಂಟೆಯಾಗಿತ್ತು. ಅವನಿಗೆ ಏನೋ ಗಲಾಟೆ ಕೇಳಿಸಿತು. ಅವನು ತನ್ನ ಮನೆಯಿಂದ ಕೆಳಗಿಳಿದು ಬಂದು ಕ್ರಿಮಿನಲ್ ಸಾಕ್ಷ್ಯ– 4 ಸಾಜಿದ್‌ನನ್ನು ನೋಡಿದ. ತನ್ನ ಮಗ ಹಾಗೂ ಕ್ರಿಮಿನಲ್ ಸಾಕ್ಷ್ಯ 6 ಶಿವರಾಜ್ ಒಬ್ಬರಿಗೊಬ್ಬರು ಮಾತಾಡುತ್ತಿದ್ದುದನ್ನು ನೋಡಿದ. ಆ ಸಮಯದಲ್ಲಿ, 2ನೇ ಆರೋಪಿ ಹಾಗೂ ಇತರ 3 ಜನರೊಂದಿಗೆ 1ನೇ ಆರೋಪಿಯು ಅಲ್ಲಿಗೆ ಬಂದು ತನ್ನ ಮಗನೊಂದಿಗೆ ಅನಗತ್ಯವಾಗಿ ಜಗಳ ತೆಗೆದು ಅವನನ್ನು ಥಳಿಸಿದರು. ಈ ನಡುವೆ, ಶಬೀರ್ ಅವರನ್ನು ಸಮಾಧಾನ ಪಡಿಸಿದರು. ಅವರು ತನ್ನ ಮಗ–ಸಜೀದ್ ಅಹ್ಮದ್‌ನನ್ನು ಮನೆ ಕಡೆಗೆ ಹಿಂದಕ್ಕೆ ಕರೆದೊಯ್ಯುತ್ತಿದ್ದಾಗ, ಇಬ್ಬರೂ ಆರೋಪಿತರು ಮೂರಕ್ಕಿಂತಲೂ ಹೆಚ್ಚು ಜನರೊಂದಿಗೆ ನಮ್ಮನ್ನು ಹಿಂಬಾಲಿಸಿದರು ಹಾಗೂ ನಮ್ಮ ಮನೆಯ ಮುಂದೆ ಮಗ ಸಾಜೀದ್‌ನನ್ನು ಥಳಿಸಲು ಪ್ರಾರಂಭಿಸಿದರು ಹಾಗೂ 1ನೇ ಆರೋಪಿಯು ನನ್ನ ಎಡಗಣ್ಣ ಮೇಲೆ ಹೊಡೆದ ಹಾಗೂ 2ನೇ ಆರೋಪಿಯು ಬೆನ್ನ ಮೇಲೆ ಹೊಡೆದು ತನ್ನ ಮಗ ಸಾಜೀದ್‌ನನ್ನು ಗಾಯಗೊಳಿಸಿದರು.

(ಸಿ) ಗಲಾಟೆಯನ್ನು ಕೇಳಿಸಿಕೊಂಡ ನಂತರ ಕ್ರಿಮಿನಲ್ ಸಾಕ್ಷ್ಯ 4 ಸಾಜಿದ್‌ನ ಹಿರಿಯ ಅಣ್ಣ ಮೃತ ಜಾವೆದ್ ಅಹ್ಮದ್, ಮನೆಯಿಂದ ಹೊರಬಂದು, ಈ ವಿಷಯದಲ್ಲಿ ಮಧ್ಯೆ ಬಂದು ಆರೋಪಿತರನ್ನು ಯಾಕೆ ತನ್ನ ಸಹೋದರನನ್ನು

ನೀವು ಥಳಿಸುತ್ತಿರುವಿರೆಂದು ಕೇಳಿದ. ಆಗ 1ನೇ ಆರೋಪಿಯು, ಕೆಟ್ಟ ಭಾಷೆಯಲ್ಲಿ ಜಾವೆದ್‌ನನ್ನು ಬೈಯ್ಯಲು ಪ್ರಾರಂಭಿಸಿದ ಹಾಗೂ ಯಾಕೆ ಅವನು ನಮ್ಮ ದಾರಿಗೆ ಬಂದಿದ್ದನೆಂದು ಕೇಳಿದ. ಹಾಗೆ ಹೇಳುತ್ತಾ 1ನೇ ಆರೋಪಿಯು ಜಾವೆದ್‌ನ ಕಪೋಲದ ಮೇಲೆ ಬಾರಿಸಿದ ಹಾಗೂ 2ನೇ ಆರೋಪಿಯು ಅವನ ಎದೆಯ ಮೇಲೆ ಗುದ್ದಿದ ಹಾಗೂ ಅವರೆಲ್ಲರೂ ಅವನ ಹೊಟ್ಟೆಯ ಮೇಲೆ ಒದ್ದರು. ಇದರ ಪರಿಣಾಮವಾಗಿ, ಜಾವೆದ್ ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರು. ಇದಾದನಂತರ ಆರೋಪಿಗಳೆಲ್ಲರೂ ಓಡಿ ಹೋದರು.

(ಡಿ) ಮಧ್ಯರಾತ್ರಿಯಲ್ಲಿ ಸಾಜೀದ್ ಪೊಲೀಸು ಠಾಣೆಗೆ ಹೋಗಿ ಸಂ.1 ರಿಂದ 3ರವರೆಗಿನ ಸಂಖ್ಯೆಯ ಹಾಗೂ ಇತರ ಅಪರಿಚಿತ ವ್ಯಕ್ತಿಗಳ ಆರೋಪಿಗಳ ವಿರುದ್ಧ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದರು. ಇದರ ಆಧಾರದ ಮೇಲೆ ಅಪರಾಧ ಸಂ.133/08ರಲ್ಲಿ ಪ್ರಕರಣವನ್ನು ದಾಖಲಿಸಲಾಯಿತು. ತನಿಖೆಯನ್ನು ಪೂರ್ಣಗೊಳಿಸಿದ ನಂತರ ಆರೋಪಿ ಸಂ.1 ಹಾಗೂ 2ರ ವಿರುದ್ಧ ಪ್ರಾರಂಭಿಕವಾಗಿ ಆರೋಪಪಟ್ಟಿಯನ್ನು ದಾಖಲಿಸಲಾಯಿತು ಹಾಗೂ ಅಧಿವಿಚಾರಣೆಯನ್ನು ನಡೆಸಲಾಯಿತು.

(ಇ) ಅಧಿವಿಚಾರಣೆಯನ್ನು ನಡೆಸುವ ಅವಧಿಯಲ್ಲಿ, 3ನೇ ಆರೋಪಿಯನ್ನು (ಇಲ್ಲಿ ಮೃತ 3ನೇ ಅಪೀಲುದಾರ) ಕಕ್ಷಿದಾರನನ್ನಾಗಿ ಮಾಡಲು ಪ್ರಾಸಿಕ್ಯೂಷನ್ನು ದಂಡ ಪ್ರಕ್ರಿಯಾ ಸಂಹಿತೆಯ 319ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿತ್ತು. ಅರ್ಜಿಯು ಪುರಸ್ಕೃತಗೊಂಡಿದ್ದು ದೇವೀಂದ್ರಪ್ಪನನ್ನು ಕಕ್ಷಿದಾರನಾಗಿ ಸೇರಿಸಿಕೊಳ್ಳಲಾಯಿತು ಹಾಗೂ ಈಗಾಗಲೇ ವಿಚಾರಣೆಗೊಳಪಡಿಸಲಾಗಿದ್ದ ಮುಖ್ಯ ಸಾಕ್ಷಿದಾರರನ್ನು ಮತ್ತೆ ವಾಪಸ್ ಕರೆಸಿಕೊಳ್ಳಲಾಯಿತು ಹಾಗೂ ಹೆಚ್ಚಿನ ವಿಚಾರಣೆ ಹಾಗೂ ಪಾಟೀ ಸವಾಲಿಗೊಳಪಡಿಸಲಾಯಿತು.

(ಎಫ್) ಪ್ರಾಸಿಕ್ಯೂಷನ್‌ನ ಪರವಾಗಿ ಸಾಕ್ಷಿಯನ್ನು ನಿರ್ಣಯಿಸಿದ ನಂತರ ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಮೇರೆಗೆ ಎಲ್ಲಾ ಆರೋಪಿಗಳನ್ನು

ವಿಚಾರಣೆ ಮಾಡಲಾಯಿತು. ಅವರು ತಮ್ಮ ಮೇಲೆ ಹೊರಿಸಲಾದ ಆಪಾದನೆಗಳನ್ನು ಒಟ್ಟಾಗಿ ನಿರಾಕರಿಸಿರುವುದು ಅವರ ಒಂದು ವಾದವಾಗಿದೆ. ಅವರು ಜಾವೆದ್‌ನು, ಮೊದಲನೇ ಮಹಡಿಯಿಂದ ನೆಲಮಹಡಿಗೆ ಬರುತ್ತಿದ್ದುದರಿಂದ ಮೆಟ್ಟಿಲುಗಳಿಂದ ಬಿದ್ದ ಕಾರಣದಿಂದ ಮೃತನಾದನೆಂದು ಪ್ರತಿಪಾದಿಸುವ ಪ್ರಯತ್ನ ಮಾಡಿದ್ದಾರೆ. ವಾದಗಳನ್ನು ಆಲಿಸಿ ಹಾಗೂ ದಾಖಲೆಯಲ್ಲಿರುವ ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯವನ್ನು ಮೌಲ್ಯ ಮಾಪನ ಮಾಡಿದ ನಂತರ ಎಲ್ಲಾ ಅಪೀಲುದಾರರು ಭಾರತೀಯ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 323 ಹಾಗೂ 304–Iನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಅಪರಾಧಿಗಳೆಂದು ಕಂಡು ಬಂದಿದ್ದಾರೆ. ಅವರನ್ನು ಇತರ ಎಲ್ಲಾ ಅಪರಾಧಗಳನ್ನು ಎಂದರೆ ಭಾರತೀಯ ದಂಡ ಸಂಹಿತೆಯೊಂದಿಗೆ ಓದಲಾದ 324, 341, 504 ಹಾಗೂ 302ನೇ ಪ್ರಕರಣಗಳಿಂದ ಖುಲಾಸೆಗೊಳಿಸಲಾಗಿದೆ.

(ಜಿ) 17 ಜನರನ್ನು, ಸಾಕ್ಷಿದಾರರೆಂದು ಶಹಬಾದ್ ಪೋಲೀಸರು ಆರೋಪಪಟ್ಟಿಯಲ್ಲಿ ಸೇರಿಸಿದ್ದಾರೆ. ಅವರ ಪೈಕಿ 15 ಜನರನ್ನು ವಿಚಾರಣೆ ಮಾಡಲಾಗಿದೆ. ಕ್ರಿಮಿನಲ್ ಸಾಕ್ಷ್ಯ ಯಕ್ಬಾಲ್ ಅಹ್ಮದ್‌ನನ್ನು ಪ್ರಾ.ಸಾ. 1 ಎಂದು ವಿಚಾರಣೆ ಮಾಡಲಾಗಿದೆ ಹಾಗೂ ಅವನು, ಶಬೀರ್ ಅಹ್ಮದ್ ಮನೆಯ ಬಳಿ ಘಟನೆ ನಡೆದ ಮಾರನೆಯ ದಿನದಂದು ರಾತ್ರಿ 7.00 ಹಾಗೂ 8.00 ಗಂಟೆ ನಡುವೆ ಬರೆದ ನಿಶಾನೆ ಪಿ.1–ಪಂಚನಾಮೆಯ ಸಾಕ್ಷಿಯಾಗಿದ್ದಾನೆ. ಅವನು ಪ್ರಾಸಿಕ್ಯೂಷನ್ ಪ್ರಕರಣವನ್ನು ಬೆಂಬಲಿಸಿದ್ದಾನೆ. ಕ್ರಿಮಿನಲ್ ಸಾಕ್ಷ್ಯ 6–ಶಿವರಾಜ್‌ನನ್ನು ಪ್ರಾ.ಸಾ.2 ಎಂದು ವಿಚಾರಣೆ ಮಾಡಲಾಗಿದೆ ಹಾಗೂ ಅವನು ಪ್ರತ್ಯಕ್ಷ ಸಾಕ್ಷಿಯಾಗಿರುವನೆಂದು ತಿಳಿಸಲಾಗಿದ್ದು, ಪ್ರಾಸಿಕ್ಯೂಷನ್‌ನ ಪ್ರಕರಣದ ನಂಬಿಕೆಯ ಎದುರು ಸಾಕ್ಷಿಯಾಗಿದ್ದಾನೆ.

4. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಬಾಬುರಾವ್ ಮಂಗಾನೆಯವರು, ಪ್ರಾಸಿಕ್ಯೂಷನ್‌ನ ಪರವಾಗಿ ವಿಚಾರಣೆ ಮಾಡಲಾದ

ಮುಖ್ಯ ಸಾಕ್ಷಿದಾರರು ಒಂದು ಅರ್ಥದಲ್ಲಿ ಒಂದೇ ಕುಟುಂಬದ ಸದಸ್ಯರಾಗಿರುವರೆಂದು ವಾದಿಸಿದ್ದಾರೆ. ಅವರ ಪ್ರಕಾರ, ಅಧಿವಿಚಾರಣಾ ನ್ಯಾಯಾಲಯವು, ಅವರ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡುವಾಗ, ಅಗತ್ಯ ಎಚ್ಚರಿಕೆಯನ್ನು ತೆಗೆದುಕೊಂಡಿಲ್ಲ. ಅವರು, ಪ್ರಾ.ಸಾ.11–ಮಹ್ಮದ್ ಯೂಸುಫ್ ವಿರುದ್ಧ ಸಾಕ್ಷಿಯಾಗಿ ತಿರುಗಿದ್ದಾನೆ ಹಾಗೂ ಇದನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ ಎಂದು ವಾದಿಸಿದ್ದಾರೆ. ಅಲ್ಲದೆ, ಅವರು ಅಧಿವಿಚಾರಣಾ ನ್ಯಾಯಾಲಯವು, ಜಾವೆದ್‌ನ ಮರಣವು ಆರೋಪಿಗಳು ಥಳಿಸಿದ ಕಾರಣದಿಂದ ಆದ ನರಗಳ ಊತ ಹಾಗೂ ಮಾನಸಿಕ ಆಘಾತದಿಂದ ಸಾವು ಸಂಭವಿಸಿದೆಯೆನ್ನುವ ನಿರ್ಣಯಕ್ಕೆ ಬಂದಿರುವ ವೈದ್ಯರ ಅಭಿಪ್ರಾಯವನ್ನು ಆಧರಿಸಿದೆಯೆಂದು ವಾದಿಸಿದ್ದಾರೆ. ಅಂಥ ಅಭಿಪ್ರಾಯವು ಸಮರ್ಪಕವಾದ ಹಾಗೂ ವಿಶ್ವಾಸಾರ್ಹ ಮಾಹಿತಿಯನ್ನು ಆಧರಿಸಿಲ್ಲವೆಂದು, ಆದುದರಿಂದ ಅಧಿವಿಚಾರಣಾ ನ್ಯಾಯಾಲಯವು ಅವರ ಅಭಿಪ್ರಾಯವನ್ನು ಅವಲಂಬಿಸಬಾರದಾಗಿತ್ತೆಂದು ವಾದಿಸಿದ್ದಾರೆ.

5. ಅಲ್ಲದೆ, ಅವರು, ಒಂದು ಕಡೆ ಪ್ರಕರಣವು ಭಾರತೀಯ ದಂಡ ಸಂಹಿತೆಯ 304ನೇ ಪ್ರಕರಣದ ಭಾಗ–I ಅಥವಾ ಭಾಗ–IIರ ವ್ಯಾಪ್ತಿಯೊಳಗೆ ಬರುವುದಿಲ್ಲವೆಂದು ಹಾಗೂ ಬಹುಶಃ ಇದು, ನ್ಯಾಯಾಲಯದ ಮನಸ್ಸಿನಲ್ಲಿ ನಂಬಿಕೆಯನ್ನು ಹುಟ್ಟಿಸುವ, ಮೃತನಿಗೆ ಸಂಬಂಧಪಟ್ಟ ಸಾಕ್ಷಿದಾರರ ಸಾಕ್ಷ್ಯವನ್ನು ಉಪಬಂಧಿಸಲಾದ 323ನೇ ಪ್ರಕರಣದ ಅಡಿಯಲ್ಲಿ ಬರುತ್ತದೆ ಎಂದು ವಾದಿಸಿದ್ದಾರೆ. ಅವರು, ಮೃತನ ದೇಹದಲ್ಲಿ ಯಾವುದೇ ಆಂತರಿಕ ಅಥವಾ ಬಾಹ್ಯ ಗಾಯವಿರಲಿಲ್ಲವೆಂದು ವಾದಿಸಲು, ಅಧಿವಿಚಾರಣಾ ನ್ಯಾಯಾಲಯವು, ಭಾರತೀಯ ದಂಡ ಸಂಹಿತೆಯ 304ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಆರೋಪಿಗಳ ಅಪರಾಧ ನಿರ್ಣಯ ಮಾಡುವುದನ್ನು ಸಮರ್ಥಿಸಿಕೊಂಡಿಲ್ಲವೆಂದು ***ರಾಜಸ್ತಾನ ರಾಜ್ಯ –ವಿರುದ್ಧ– ಮೋಹನ್‌ಲಾಲ್ ಹಾಗೂ ಇತರ 7 ಜನರು*** [1], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ಣಯವನ್ನು ಅವಲಂಬಿಸಿದ್ದಾರೆ.

1. [2012] 2 ಅಪರಾಧಗಳು 73 (ಎಸ್‌ಸಿ)

6. ಇದಕ್ಕೆ ವಿರುದ್ಧವಾಗಿ ಮತ್ತೊಂದು ಕಡೆಯಲ್ಲಿ, ಮಾನ್ಯ ಎಚ್‌ಸಿಜಿಪಿ ಶ್ರೀ ಶೇಷಾದ್ರಿ ಜಯಶಂಕರ್ ಎಂ. ಇವರು, ಅಧಿವಿಚಾರಣಾ ನ್ಯಾಯಾಲಯವು, ವೈದ್ಯರ ಅಭಿಪ್ರಾಯವನ್ನು ಆಧರಿಸಿರುವುದನ್ನು ಸಮರ್ಥಿತವಾಗಿದೆಯೆಂದು ಹಾಗೂ ಅವರ ಆವೃತ್ತಿಯನ್ನು ತೆಗೆದುಹಾಕಲು ಯಾವುದೇ ಕಾರಣವಿಲ್ಲವೆಂದು ಭಾವಾವೇಶ ಪೂರಿತವಾಗಿ ವಾದಿಸಿದ್ದಾರೆ. ಶಬೀರ್ ಅಹ್ಮದ್ ಹಾಗೂ ಅವನ ಕುಟುಂಬದ ಸದಸ್ಯರ ಸಾಕ್ಷ್ಯವನ್ನು, ಅವರು ಒಬ್ಬರಿಗೊಬ್ಬರು ಸಂಬಂಧಪಟ್ಟವರಾಗಿದ್ದಾರೆ ಎಂಬ ಆಧಾರದ ಮೇಲೆ ತಿರಸ್ಕರಿಸಲು ಸಾಧ್ಯವಿಲ್ಲವೆಂದು ವಾದಿಸಿದ್ದಾರೆ. ಈ ಸಾಕ್ಷಿದಾರರ ಸಾಕ್ಷ್ಯವು ವಿಶ್ವಾಸಾರ್ಹವಾದುದು ಹಾಗೂ ಅವರು ಪ್ರಕರಣಕ್ಕೆ ಸಂಬಂಧಪಡದ ವ್ಯಕ್ತಿಗಳನ್ನು ದೋಷಾರೋಪಣೆಯಲ್ಲಿ ಸಿಕ್ಕಿಸಲು ವಾಸ್ತವಿಕ ಆಕ್ರಮಣಕಾರರನ್ನು ಕೈಬಿಟ್ಟಿಲ್ಲವೆಂದು ವಾದಿಸಿದ್ದಾರೆ. ಅವರು ***ಸಂಜೀವ್ -ವಿರುದ್ಧ- ಹರಿಯಾಣ ರಾಜ್ಯ*** [2]***,*** ಪ್ರಕರಣದಲ್ಲಿ ಹಾಗೂ ವರದಿಯಾದ ***ಮೋಹನ್ ಸಿಂಗ್ ಹಾಗೂ ಮತ್ತೊಬ್ಬರು -ವಿರುದ್ಧ- ಮಧ್ಯಪ್ರದೇಶ ರಾಜ್ಯ*** [3]ದ ಪ್ರಕರಣದಲ್ಲಿನ ಮತ್ತೊಂದು ನಿರ್ಣಯದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೂರು ಜನ ನ್ಯಾಯಾಧೀಶರು ನೀಡಿದ ನಿರ್ಣಯವನ್ನು ಆಧರಿಸಿದ್ದಾರೆ.

7. ಮೇಲಿನ ನಿರ್ಣಯಗಳನ್ನು ಆಧರಿಸಿ, ಮಾನ್ಯ ಎಚ್‌ಸಿಜಿಪಿಯವರು, ಪ್ರತ್ಯಕ್ಷ ಹಾಗೂ ವೈದ್ಯಕೀಯ ದಸ್ತಾವೇಜೀಯ ಸಾಕ್ಷ್ಯದ ನಡುವೆ ಕೆಲವು ವೈರುದ್ಧ್ಯಗಳಿದ್ದರೂ ಸಹ ಪ್ರತ್ಯಕ್ಷ ಸಾಕ್ಷ್ಯವು ಲಭ್ಯವಿದ್ದು ದಾಖಲೆಗಳಲ್ಲಿರುವ ಸಾಕ್ಷ್ಯವನ್ನು ಮೌಲ್ಯ ನಿರ್ಣಯ ಮಾಡುವಾಗ ಧಾನ್ಯದಿಂದ ಹೊಟ್ಟನ್ನು ತೆಗೆಯುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ. ಅವರು, ಅಪರಾಧವನ್ನು ಮಾಡುವ ಉದ್ದೇಶವನ್ನು, ಅಪರಾಧ ಮಾಡಿದ ಸಮಯದಲ್ಲಿ, ಆದ ಘಟನೆಯನ್ನೂ ಸಹ ಕಾಣಬಹುದು ಹಾಗೂ ಥಳಿಸಿದ ರೀತಿ ಹಾಗೂ ಆದ ಗಾಯಗಳು ಹಾಗೂ ಪ್ರತ್ಯೇಕ ಸಾಕ್ಷಿದಾರರ ಆವೃತ್ತಿಯಿಂದ ಆದ ಸುತ್ತಮುತ್ತಲಿನ ಸನ್ನಿವೇಶಗಳಿಂದ ಇದು ಸೇರಿಕೊಂಡಿದೆಯೆಂದು ಅವರು ವಾದಿಸಿದ್ದಾರೆ. ಅಲ್ಲದೆ ಅವರು ಉದ್ದೇಶವನ್ನು

2. (2015) 4 ಎಸ್‌ಸಿಸಿ 387

3. [1999] 2 ಎಸ್‌ಸಿಸಿ 428

ಅಥವಾ ತಿಳಿವಳಿಕೆಯನ್ನು ಅರಿಯುವ ಸಲುವಾಗಿ ನ್ಯಾಯಾಲಯವು, ಆರೋಪಿಯ ಮನಃಸ್ಥಿತಿಯ ಕುರಿತಂತೆ ಯಾವುದೇ ಪ್ರತ್ಯಕ್ಷ ಸಾಕ್ಷಿಯಾಗಿಲ್ಲದಿರುವುದರಿಂದ ಸನ್ನಿವೇಶಗಳನ್ನು ಪರಿಶೀಲಿಸಬೇಕು.

8. ದಾಖಲೆಗಳನ್ನು ಪರಿಶೀಲಿಸಿದ ತರುವಾಯ ಹಾಗೂ ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳಾದ ಶ್ರೀ ಬಾಬುರಾವ್ ಮಂಗಾನೆ ಹಾಗೂ ರಾಜ್ಯವನ್ನು ಪ್ರತಿನಿಧಿಸಿರುವ ಮಾನ್ಯ ಎಚ್‌ಸಿಜಿಪಿಯವರ ವಾದವನ್ನು ಆಲಿಸಿದ ನಂತರ ಈ ನ್ಯಾಯಾಲಯದ ಪರಿಗಣನೆಗಾಗಿ ಈ ಮುಂದಿನ ಅಂಶಗಳು ಉದ್ಭವಿಸಿವೆ:

1) ಜಾವೇದ್ ಅಹ್ಮದ್, ಶಬೀರ್ ಅಹ್ಮದ್‌ನ ಮಗ, ದಿನಾಂಕ 7.12.2008ರಂದು ರಾತ್ರಿ 9.15ಕ್ಕೆ ಶಬೀರ್ ಅಹ್ಮದ್‌ರವರ ಮನೆಯ ಬಳಿ ಮೃತನಾದನೆಂಬುದನ್ನು ರುಜುವಾತುಪಡಿಸಲು ಪ್ರಾಸಿಕ್ಯೂಷನ್ ಸಮರ್ಥವಾಗಿದೆಯೇ?

2) ನರಗಳ ಊತ ಹಾಗೂ ಮಾನಸಿಕ ಆಘಾತಗೊಂಡು ಸಾಯುವುದಕ್ಕೆ ಕಾರಣವಾಗುವ ರೀತಿಯಲ್ಲಿ ಜಾವೇದ್‌ನನ್ನು ಎಲ್ಲಾ ಆರೋಪಿಗಳು ಥಳಿಸಿರುವುದನ್ನು ರುಜುವಾತುಪಡಿಸಲು ಪ್ರಾಸಿಕ್ಯೂಷನ್ ಸಮರ್ಥವಾಗಿದೆಯೇ?

3) ಅಧಿವಿಚಾರಣಾ ನ್ಯಾಯಾಲಯವು, ಭಾರತೀಯ ದಂಡ ಸಂಹಿತೆಯ 34ನೇ ಪ್ರಕರಣದೊಂದಿಗೆ ಓದಲಾದ 323 ಹಾಗೂ 304–I – ಪ್ರಕರಣಗಳ ಮೇರೆಗೆ

ದಂಡಿಸಬಹುದಾದ ಅಪರಾಧಗಳಿಗಾಗಿ ಆರೋಪಿಯ ಅಪರಾಧ ನಿರ್ಣಯ ಮಾಡಿರುವುದು ಸಮರ್ಥನೀಯ ವಾಗಿದೆಯೇ?

4) ಅಧಿವಿಚಾರಣಾ ನ್ಯಾಯಾಲಯವು, ಭಾರತೀಯ ದಂಡ ಸಂಹಿತೆಯ ಅನುಕ್ರಮವಾಗಿ 304–I ಹಾಗೂ 323ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ 7 ವರ್ಷ ಎರಡು ತಿಂಗಳುಗಳ ಅವಧಿಯ ಕಠಿಣ ಕಾರಾವಾಸ ಶಿಕ್ಷೆಯನ್ನು ಆರೋಪಿಗೆ ವಿಧಿಸಿರುವುದು ಸಮರ್ಥನೀಯವಾಗಿದೆಯೇ?

ಕಾರಣಗಳು

9. **ಪರಿಶೀಲನಾಂಶ ಸಂ.(1):** ಶಬೀರ್ ಅಹ್ಮದ್‌ನು ಅಪರಾಧಿಕ ಸಾಕ್ಷ್ಯ 4 ಸಾಜೀದ್ ಅಹ್ಮದ್ ಹಾಗೂ ಮೃತ ಜಾವೇದ್ ಅಹ್ಮದ್‌ನ ತಂದೆಯಾಗಿದ್ದಾನೆ ಹಾಗೂ ಹಜೀರಾ ಬೇಗಂಳ (ಪ್ರಾ.ಸಾ.12) ಪತಿಯಾಗಿದ್ದಾನೆ ಎಂಬುದರಲ್ಲಿ ಯಾವುದೇ ವಿವಾದವಿಲ್ಲ. ದಾಖಲೆಯಲ್ಲಿರುವ ಸಾಕ್ಷ್ಯವು, ಶಬೀರ್ ತನ್ನ ಮನೆಯ ಹತ್ತಿರದಲ್ಲಿ ನಡೆಯುತ್ತಿದ್ದ ಗಲಾಟೆಯನ್ನು ಕೇಳಿಸಿಕೊಂಡ ನಂತರ ತನ್ನ ಮನೆಯಿಂದ ಹೊರಗೆ ಬಂದಿದ್ದಾನೆ ಹಾಗೂ ತನ್ನ ಮಗ ಸಾಜಿದ್ ಹಾಗೂ ಶಿವರಾಜ್ ಒಬ್ಬರಿಗೊಬ್ಬರು ಮಾತಾಡುತ್ತಿರುವುದನ್ನು ನೋಡಿದ್ದಾರೆ ಹಾಗೂ ಆ ಸಮಯದಲ್ಲಿ ಆರೋಪಿ ಸಂ.1 ಹಾಗೂ 2 ಇವರು ಗೊತ್ತಿರದ ಮೂರು ಜನಕ್ಕಿಂತ ಹೆಚ್ಚಿನ ವ್ಯಕ್ತಿಗಳೊಂದಿಗೆ ತನ್ನ ಮಗನನ್ನು ಥಳಿಸಿದುದನ್ನು ನೋಡಿದ್ದಾನೆ ಎಂಬುದನ್ನು ಪ್ರಕಟಪಡಿಸುತ್ತದೆ. ಅವನು ಅಲ್ಲಿಗೆ ಹೋಗಿ ಸಮಾಧಾನಪಡಿಸಿದ್ದಾನೆ. ಆ ಸಮಯದಲ್ಲಿ ಸಾಜೀದ್‌ಗೆ ಯಾವುದೇ ಗಾಯಗಳಾಗಿರಲಿಲ್ಲ. ಪ್ರತ್ಯೇಕ ಸಾಕ್ಷಿದಾರನಾದ ಪ್ರಾಸಿಕ್ಯೂಷನ್‌ನ ವಾದವನ್ನು ಬೆಂಬಲಿಸಿರಲಿಲ್ಲ. ಆದುದರಿಂದ ಇದನ್ನು ಬಿಟ್ಟುಬಿಡಬೇಕಾಗುತ್ತದೆ.

10. ಗಾಯಗಳಾಗಿರುವ ಕುರಿತು ಮಾತನಾಡಿರುವ ದೊಡ್ಡ ಸಾಕ್ಷಿದಾರ ಸಾಜೀದ್‌ನೇ ಆಗಿದ್ದು, ಹಾಗೂ ಅವನು, ತನ್ನ ತಂದೆಯು ಅವನನ್ನು ತಮ್ಮ ಮನೆಗೆ ವಾಪಸ್ ಕಳುಹಿಸುವಾಗ, ಆರೋಪಿ ಸಂ.1 ಹಾಗೂ 2, ಅವರೊಂದಿಗಿದ್ದ ಇತರ 3 ಜನರು ತಮ್ಮನ್ನು ಹಿಂಬಾಲಿಸಿ ಅವನ ಎಡಕಿವಿಯ ಬಳಿ ಹಾಗೂ ದೇಹದ ಇತರ ಭಾಗಗಳಲ್ಲಿ ಹೊಡೆದರೆಂದು ಹೇಳಿಕೆ ನೀಡಿದ್ದಾನೆ. ನಿಶಾನೆ ಪಿ.13 ಶಹಬಾದ್‌ನ ಸಮುದಾಯ ಆರೋಗ್ಯ ಕೇಂದ್ರದ ಅಧಿಕಾರಿ ನೀಡಿದ ಗಾಯದ ಪ್ರಮಾಣಪತ್ರದಲ್ಲಿ ಹಾಜರುಪಡಿಸಲಾದ ವೈದ್ಯಕೀಯ ಪ್ರಮಾಣಪತ್ರವನ್ನು ಅವನ ಸಾಕ್ಷ್ಯವು ಪುಷ್ಟೀಕರಿಸಬೇಕಾಗುತ್ತದೆ.

11. ಪ್ರಾ.ಸಾ.6 ಡಾ॥ ಮಹ್ಮದ್ ವಾಸೀಂ, ನಿಶಾನೆ ಪಿ.13ನ್ನು ಬರೆದಿದ್ದಾರೆ. ಅವರು, ದಿನಾಂಕ 8.12.2008ರಂದು ಬೆಳಿಗ್ಗೆ 10.30ರಲ್ಲಿ ಸಾಜೀದ್ ಎಂಬ ಹೆಸರಿನ 28 ವರ್ಷ ವಯಸ್ಸಿನ ವ್ಯಕ್ತಿಯೊಬ್ಬ ಥಳಿಸಿದ ಗಾಯಗಳಾದ ಕತೆಯನ್ನು ಹೇಳಿಕೊಂಡು ನನ್ನ ಬಳಿ ಬಂದ ಎಂದು ಹೇಳಿದ್ದಾರೆ. ಅವನ ಜೊತೆಯಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಸಹಾ ಇದ್ದರು (ಪಿ.ಸಿ.823) ಅವನನ್ನು ಪರಿಶೀಲಿಸಿದ ನಂತರ ಎಡಗಣ್ಣಿನಲ್ಲಿ 1/4 ಸೆಂ.ಮೀ. x 1/4 ಸೆಂ.ಮೀ ಅಳತೆಯ ತರಚಿಕೊಂಡ ಗುರುತು ಹಾಗೂ 1/4 ಸೆಂ.ಮೀ x 1/4 ಸೆಂ.ಮೀ ಅಳತೆಯಲ್ಲಿ ಗುದ್ದಿರುವುದು, ಎಡತೋಳಿನ ಬಳಿ, ಬಲ ಮೊಣಕೈ ಹಾಗೂ ಬಲ ಮಣಿಕಟ್ಟಿನಲ್ಲಿ ಒಂದು ಗುರುತು ಕಂಡು ಬಂತು. ಆರೋಪಿಯ ಪರ ಹಾಜರಾದ ಮಾನ್ಯ ವಕೀಲರು ಅವನನ್ನು ಪಾಟೀ ಸವಾಲಿಗೊಳಪಡಿಸಿದರೂ ಆತನಿಂದ ನೀಡಲಾದ ಗಾಯದ ಅಧಿಕೃತ ಪ್ರಮಾಣಪತ್ರದ ಬಗೆಯಾಗಲಿ ಇಲ್ಲವೇ ಅವನ ಹೇಳಿಕೆಯ ವಿರುದ್ಧವಾಗಿ ಏನನ್ನಾದರೂ ಹೊರಹಾಕಿಸುವ ಪ್ರಯತ್ನವು ಫಲ ನೀಡಲಿಲ್ಲ.

12. ಸಾಜಿದ್‌ನನ್ನು ಪ್ರಾ.ಸಾ.7 ಎಂದು ಪರೀಕ್ಷಿಸಲಾಗಿದೆ ಹಾಗೂ ತನ್ನ ಸಹೋದರನಿಗೆ ಆರೋಪಿಗಳು ಥಳಿಸಿದ ಬಗ್ಗೆ ಅವನು ಮಾತನಾಡಿದ್ದಾನೆ. ಶಬೀರ್ ಅಹ್ಮದ್, ಸಾಜೀದ್ ಅಹ್ಮದ್, ಹಜೀರಾ ಬೇಗಂ ಹಾಗೂ ಮೊಹ್ಮದ್ ಯೂಸುಫ್ ಎಲ್ಲರೂ ಶಬೀರ್ ಅಹ್ಮದ್‌ನ ಮನೆಯ ಬಳಿ ಮೃತನನ್ನು ಆರೋಪಿಯು ಥಳಿಸಿದ

ಕುರಿತು ಹೇಳಿಕೆ ನೀಡಿದ್ದಾರೆ. ಸಂಬಂಧಿಕರ ಈ ಸಾಕ್ಷಿದಾರರ ಸಾಕ್ಷ್ಯವನ್ನು ಸಂಪೂರ್ಣವಾಗಿ ತಿರಸ್ಕರಿಸಲು ಸಾಧ್ಯವಿಲ್ಲ ಹಾಗೂ ಇದನ್ನು ಸ್ವಲ್ಪ ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡಬೇಕಾಗುತ್ತದೆ.

13. ಪ್ರಾ.ಸಾ.3 ಶಬೀರ್ ಅಹ್ಮದ್ ನಿರ್ದಿಷ್ಟವಾಗಿ, ಅವನು ತನ್ನ ಮಗನನ್ನು ತನ್ನೊಂದಿಗೆ ಹಿಂದಕ್ಕೆ ಮನೆಗೆ ಕರೆದುಕೊಂಡು ಹೋಗುತ್ತಿದ್ದಾಗ, ಪರಿಚಯವಿರದ 3 ಜನರೊಂದಿಗಿದ್ದ ಆರೋಪಿಯು ತಮ್ಮನ್ನು ಹಿಂಬಾಲಿಸಿದರೆಂದು ಹಾಗೂ ತನ್ನ ಮಗ ಸಾಜೀದ್‌ನನ್ನು ಥಳಿಸಿದರೆಂದು ಗಲಾಟೆಯನ್ನು ಕೇಳಿಸಿಕೊಂಡ ನಂತರ ತನ್ನ ಮಗ ಜಾವೆದ್ ಕೆಳಗೆ ಬಂದನೆಂದು ಹಾಗೂ ಅವರನ್ನು ಯಾಕೆ ಅವನಿಗೆ ಹೊಡಿದಿರೆಂದು ಆರೋಪಿಯನ್ನು ಕೇಳಿದನೆಂದು ಹೇಳಿಕೆ ನೀಡಿದ್ದಾರೆ. ಅವನ ಪ್ರಶ್ನೆಯಿಂದ ಉದ್ರಿಕ್ತಗೊಂಡು 1ನೇ ಆಪಾದಿತನು ಅವನ ಕೆನ್ನೆಗೆ ಹೊಡೆದನೆಂದು ಹಾಗೂ 2ನೇ ಆಪಾದಿತನು ಅವನ ಹೊಟ್ಟೆಗೆ ಹೊಡೆದನೆಂದು ಹಾಗೂ 3 ಜನ ಪರಿಚಯವಿಲ್ಲದ ವ್ಯಕ್ತಿಗಳು ಹಾಗೂ ಈ ಆರೋಪಿಯು ಅವನನ್ನು ಥಳಿಸಿದರೆಂದು ಹಾಗೂ ಕಾಲುಗಳಿಂದ ಒದ್ದರೆಂದು ಹೇಳಿಕೆ ನೀಡಿದ್ದಾನೆ. ಅಲ್ಲದೆ ಅವನು ಜಾವೆದ್ ಕೆಳಗಡೆಗೆ ಬಿದ್ದಾಗ, ಆರೋಪಿಯು ಅವನ ವೃಷಣದ ಮೇಲೆ ಒದ್ದರೆಂದು ಹಾಗೂ ಅವನು ಸ್ಥಳದಲ್ಲೇ ಮೃತನಾದನೆಂದು ಹೇಳಿಕೆ ನೀಡಿದ್ದಾನೆ. ಅವನನ್ನು ಥಳಿಸಿದ ಕಾರಣದಿಂದ ಮರಣಹೊಂದಿದನೇ ಅಥವಾ ಇಲ್ಲವೇ ಎಂಬುದನ್ನು ಪರಿಗಣನೆಗಾಗಿ ರೂಪಿಸಲಾದ ಮುಂದಿನ ಅಂಶದಲ್ಲಿ ಪ್ರತ್ಯೇಕವಾಗಿ ಚರ್ಚಿಸಲಾಗುವುದು. ಅವನು ಸ್ಥಳದಲ್ಲೇ ಮೃತಪಟ್ಟನೆಂಬುದನ್ನು ತಿಳಿಸಲು ಅದು ಸಾಕು ಹಾಗೂ ಇದು ಮಾರನೇ ದಿನದಂದು ನಿಶಾನೆ ಪಿ.1ರ ಪ್ರಕಾರ ರೂಪಿಸಲಾದ ಪಂಚನಾಮೆ ಮಹಜರಿನಿಂದ ಹಾಗೂ ನಿಶಾನೆ ಪಿ.12ರ ಪ್ರಕಾರ ವೈದ್ಯರು ನೀಡಿದ ಮರಣೋತ್ತರ ಶವಪರೀಕ್ಷೆಯಿಂದ ತಿಳಿದುಬರುತ್ತದೆ.

14. ಪ್ರಾ.ಸಾ.5, ಡಾ॥ ಪರಮೇಶ್ವರ ಇವರು, ಆಘಾತದಿಂದ ನರಗಳ ಊತವಾದ ಕಾರಣದಿಂದ ಹೃದಯ ರಕ್ತನಾಳಗಳು ವಿಫಲವಾದುದರಿಂದ ಸಾವು ಸಂಭವಿಸಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಅವರು ಮಾರನೇ ದಿನ ದಿನಾಂಕ

8.12.2008ರಂದು ಬೆಳಿಗ್ಗೆ 9.00 ಹಾಗೂ 11.00 ಗಂಟೆ ನಡುವೆ ಮೃತ ದೇಹದ ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಿದ್ದಾರೆ. ಮುಖ್ಯ ಸಾಕ್ಷಿದಾರರನ್ನು ದೀರ್ಘವಾದ ಪಾಟೀ ಸವಾಲಿಗೊಳಪಡಿಸಿದ್ದರೂ ಸಹ, ಜಾವೇದ್ ಅಹ್ಮದ್ ದಿನಾಂಕ 7.12.2008ರಂದು ರಾತ್ರಿ 9.15ರಲ್ಲಿ ತಮ್ಮ ಮನೆಯ ಬಳಿ ಮರಣ ಹೊಂದಿಲ್ಲವೆಂದು ಪ್ರತ್ಯೇಕವಾಗಿ ತಿಳಿಸಿದರೂ ಸಹ ಅವರ ಬಾಯಿಂದ ಏನೂ ಹೊರಬೀಳಲಿಲ್ಲ. ಜಾವೇದನು ಅವನ ಮನೆಯ ಬಳಿ ಮೃತನಾದನೆಂಬುದನ್ನು ತಿಳಿಸಲು ಪ್ರಾಸಿಕ್ಯೂಷನ್ನು ದಾಖಲಿಸಿರುವ ಮಾಹಿತಿಗಳು ಸಾಕಷ್ಟಿವೆ. ಆದುದರಿಂದ ಪರಿಶೀಲನಾಂಶ ಸಂ.(1)ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

15. **ಪರಿಶೀಲನಾಂಶ ಸಂಖ್ಯೆ.(2)**: ಮಾನ್ಯ ಎಚ್‌ಸಿಜಿಪಿ ಶ್ರೀ ಶೇಷಾದ್ರಿ ಜಯಶಂಕರ್‌ರವರು, ವಾದಿಸಿರುವುದು ಏನೆಂದರೆ, ಪ್ರಸ್ತುತ ಪ್ರಕರಣದಲ್ಲಿ ವೈದ್ಯರ ಸಾಕ್ಷ್ಯವು ನಿರ್ಣಾಯಕವಾದುದಾಗಿದ್ದು, ಅಧಿವಿಚಾರಣಾ ನ್ಯಾಯಾಲಯವು ಇದನ್ನು ಆಧರಿಸಿದೆ ಎಂಬುದಾಗಿದೆ. ಆದ್ದರಿಂದ ಪ್ರಾ.ಸಾ. 5 ಡಾ॥ ಪರಮೇಶ್ವರರು ಶಹಬಾದ್‌ನಲ್ಲಿ ವೈದ್ಯಕೀಯ ಅಧಿಕಾರಿಯಾಗಿದ್ದರಿಂದ ಹಾಗೂ ದಿನಾಂಕ 8.12.2008ರ ಬೆಳಿಗ್ಗೆ ಅವರು ಕಾರ್ಯ ನಿರ್ವಹಿಸಿದ್ದರಿಂದ ಅವರ ಸಾಕ್ಷ್ಯವನ್ನು ನೋಡಬೇಕಾಗುತ್ತದೆ. ಇವರು ದಿನಾಂಕ 8.12.2008ರಂದು ಬೆಳಿಗ್ಗೆ 9.00 ಹಾಗೂ 11.00ರ ನಡುವೆ ಜಾವೆದ್‌ನ ಮೃತದೇಹವನ್ನು ತಾವೆ ಖುದ್ದಾಗಿ ಪರೀಕ್ಷೆಯನ್ನು ನಡೆಸಿರುವ ವ್ಯಕ್ತಿಯಾಗಿದ್ದರು. ಅವರ ಸಂಪೂರ್ಣ ಪರೀಕ್ಷೆಯು ಸುಸಂಬದ್ಧವಾದುದಾಗಿದ್ದು, ಇದನ್ನು ಈ ಕೆಳಗೆ ಉದ್ಧೃತಗೊಳಿಸಲಾಗಿದೆ.

ಸರ್ಕಾರಿ ಅಭಿಯೋಜಕರ ಮೇಲ್ವಿಚಾರಣೆಯಲ್ಲಿ ಪರಿಶೀಲನೆ:

ಡಿಸೆಂಬರ್ 2008ರಲ್ಲಿ, ನಾನು 8.12.2008ರಂದು ಸಿಎಚ್‌ಸಿ ಶಹಬಾದ್‌ನಲ್ಲಿ ವೈದ್ಯಕೀಯ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು ಬೆಳಿಗ್ಗೆ ಸುಮಾರು 9 ರಿಂದ 11 ಗಂಟೆಯಲ್ಲಿ ನಾನು ಜಾವೇದ್‌ನ ಮೃತ ದೇಹಕ್ಕೆ

ಮರಣೋತ್ತರ ಶವಪರೀಕ್ಷೆಯನ್ನು ಮಾಡಿರುತ್ತೇನೆ. ಮೃತ ದೇಹವನ್ನು ಪರೀಕ್ಷಿಸಿದ ನಂತರ ಮೃತದೇಹದಲ್ಲಿ ಯಾವುದೇ ಬಾಹ್ಯ ಗಾಯಗಳು ಕಂಡು ಬಂದಿರುವುದಿಲ್ಲ. ಮೃತ ದೇಹವನ್ನು ವಿಚ್ಛೇದಿಸಿದ ನಂತರ ಎಲ್ಲಾ ಗಾಯಗೊಂಡ ಅಂಗಗಳು ಅಖಂಡವಾಗಿದ್ದವು. ಮಾನಸಿಕ ಆಘಾತದಿಂದ ಆದ ನರಗಳ ಊತದ ಆಘಾತದ ಕಾರಣದಿಂದ ಹೃದಯದ ಶ್ವಾಸೋಚ್ಛಾಸದಿಂದ ಸಾವು ಸಂಭವಿಸಿದೆಯೆಂದು ನಾನು ಅಭಿಪ್ರಾಯಪಟ್ಟಿರುತ್ತೇನೆ. 24 ಗಂಟೆಗಳೊಳಗೆ ಮರಣವಾಗಿದೆ. ತದನುಸಾರವಾಗಿ ನಾನು ಮರಣೋತ್ತರ ಶವ ಪರೀಕ್ಷೆ (PME) ವರದಿಯನ್ನು ನೀಡಿರುತ್ತೇನೆ. ಇದರಲ್ಲಿ ನನ್ನ ಸಹಿ ಇರುತ್ತದೆ. ಮರಣೋತ್ತರ ಶವ ಪರೀಕ್ಷೆ ವರದಿಯನ್ನು ನಿಶಾನೆ.ಪಿ.12ರಲ್ಲಿ ಗುರುತು ಮಾಡಲಾಗಿದೆ. ವೈದ್ಯಕೀಯ ಪರಿಭಾಷೆಯಲ್ಲಿ ಹಾನಿ ಎಂಬ ಪದವು ಗುದ್ದುವುದಕ್ಕೆ ಹಾಗೂ ಊದಿಕೊಳ್ಳುವುದಕ್ಕೆ ಹಾಗೂ ಒದೆಯುವುದಕ್ಕೂ ಸಂಬಂಧಪಡುತ್ತದೆ. ಗಂಡಸ್ಥಳದ ಪ್ರದೇಶವು ಹಾಗೂ ಹೃದಯದ ಕೆಳಭಾಗ ಊದಿಕೊಂಡಿರುತ್ತದೆ ಹಾಗೂ ಆಘಾತಕ್ಕೆ ಹೊಟ್ಟೆ ಹಾಗೂ ವೃಷಣಗಳು ನರಗಳ ಊತದ ಕಾರಣದಿಂದ ಆಗಿರಬಹುದು ಹಾಗೂ ಇದರಿಂದ ಸಾವು ಸಂಭವಿಸಿರಬಹುದು. ಬಾಹ್ಯ ಹಾನಿಯಾಗದಿದ್ದರೂ ಸಹ ಆಘಾತ ಆಗಿರಬಹುದು.

ಎಸ್‌ಎಂಪಿ ವಕೀಲರ ಪಾಟೀಸವಾಲು:

ಮೃತದೇಹವನ್ನು ಪಿ.ಸಿ.ಸಂ.46 ಇವರು ತಂದರು. ನಾನು ಸಾವಿಗೆ ಕಾರಣವಾದ ಯಾವ ವಿಷಯವನ್ನು

ವಿಚಾರಿಸಲಿಲ್ಲ. ಯಾವುದೇ ಬಾಹ್ಯ ಗಾಯಗಳಿಲ್ಲದ್ದರಿಂದ ಆಂತರಿಕ ಗಾಯಗಳಿಲ್ಲದಿದ್ದರೂ ನರಗಳ ಊತದ ಆಘಾತದಿಂದ ಮರಣ ಸಂಭವಿಸಿದ ಸಾಧ್ಯತೆಯಿರುತ್ತದೆ. ಎದೆ ಹಾಗೂ ವೃಷಣಗಳಿಗೆ ಒದ್ದು ಹಾಗೂ ಗುದ್ದಿದ್ದು ಯಾವುದೇ ಆಂತರಿಕ ಹಾನಿ ಆಗಿರಬಹುದು, ಆಂತರಿಕ ಗಾಯಗಳಾಗಿರುವ ಸಾಧ್ಯತೆ ಇರುತ್ತದೆ. ಮೃತನು ತನ್ನ ಕೊನೆಯ ಊಟವನ್ನು ಮುಗಿಸಿದ 6 ರಿಂದ 8 ಗಂಟೆಗಳ ನಂತರ ಮೃತನಾಗಿರುವುದು ಸತ್ಯ. ಮರಣೋತ್ತರ ಶವ ಪರೀಕ್ಷೆಯಲ್ಲಿ ನಿರ್ದಿಷ್ಟ ಮರಣದ ಸಮಯವನ್ನು ನೀಡಿದ್ದೇನೆ. ಮೃತನು ಹೃದಯಾಘಾತದಿಂದ ಮರಣವಾಗಿದ್ದಾನೆಂಬುದು ತಪ್ಪಾದುದಾಗಿದೆ ಹಾಗೂ ನಾನು ತಪ್ಪು ಮರಣೋತ್ತರ ಶವ ಪರೀಕ್ಷಾ ವರದಿಯನ್ನು ನೀಡಿದ್ದೇನೆ. ಆಘಾತವು ಬೇರೆ ರೀತಿಯ ಹಾನಿಯಿಂದ ಆಗಿರಬಹುದು.

ಸರ್ಕಾರಿ ಅಭಿಯೋಜಕ ವಕೀಲರಿಂದ ಹೆಚ್ಚಿನ ಮುಖ್ಯ ಮರು–ಪರಿಶೀಲನೆ:

ವ್ಯಕ್ತಿಯ ಕೈಯಿಂದ ಥಳಿಸಿದ್ದರೆ ಹಾಗೂ ದೇಹದ ಮೇಲೆ ಗುದ್ದಿದ್ದರೆ ಕಣ್ಣಿಗೆ ಕಾಣಿಸುವ ಗಾಯ ಕಾರಣವಾಗಿರುವುದಿಲ್ಲ. ವ್ಯಕ್ತಿಯನ್ನು ಕೂಡಲೇ ಮನೆಗೆ ಕೊಂಡೊಯ್ದಿದ್ದರೆ ಆಕ್ರಮಣ ಮಾಡಿದ್ದರೆ ಆಘಾತವಾಗಿರುತ್ತದೆ. ಆಘಾತದ ಕಾರಣದಿಂದಲೂ ಸಹಾ ಮರಣ ಸಂಭವಿಸಿರಬಹುದು. ಮೃತನ ಹೊಟ್ಟೆಯಲ್ಲಿ ಹೊರಗಿನ ಅಂಶ–3 ಕಂಡು ಬಂದಿರುವುದಿಲ್ಲ. ನರಗಳಿಗಾದ ಆಘಾತದಿಂದಲೂ ಸಹಾ ಹೃದಯಾಘಾತವಾಗಿರಬಹುದು.

ಶ್ರೀ ಎಸ್ಎಂಪಿ ವಕೀಲರ ಹೆಚ್ಚಿನ ಮರು ಪರಿಶೀಲನೆ:

> ವ್ಯಕ್ತಿಯನ್ನು ನೆಲಕ್ಕೆ ಬೀಳಿಸಿಕೊಂಡು 2-3 ಜನ ಅವನಿಗೆ ಗುದ್ದಿದ್ದರೆ ಹಾಗೂ 10 ರಿಂದ 15 ಬಾರಿ ಹೊಡೆದಿದ್ದರೆ ದೇಹದ ಮೇಲೆ ತರಚುಗಾಯಗಳಾಗುತ್ತವೆಯೆಂಬುದು ನಿಜ. ವ್ಯಕ್ತಿಯನ್ನು ಬಲವಾಗಿ ಗುದ್ದಿದರೆ ಅಥವಾ ಒದ್ದರೆ ಗುಲ್ಮವು (ತೊರಳೆ) ಬಿರುಕುಬಿಟ್ಟು ಊತವಾಗಿರುತ್ತದೆ.

16. ಮಾನ್ಯ ಎಚ್‌ಸಿಜಿಪಿಯವರ ವಾದ ಏನೆಂದರೆ, ಆಂತರಿಕವಾಗಿಯಾಗಲಿ ಅಥವಾ ಬಾಹ್ಯವಾಗಿಯಾಗಲಿ ಕಂಡು ಬಂದಿರುವ ಗಾಯಗಳಿರದಿದ್ದರೂ, ಆಘಾತದಿಂದ ಸಾವುಂಟಾಗಿದೆಯೆಂದು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ ಹಾಗೂ ಇದರಿಂದ ಅಂಥ ಅಭಿಪ್ರಾಯವನ್ನು ಕಡೆಗಣಿಸಲಾಗುವುದಿಲ್ಲ ಎಂಬುದಾಗಿದೆ. ಮತ್ತೊಂದು ಕಡೆ, ಅಪೀಲುದಾರರ ಪರವಾದ ಶ್ರೀ ಬಾಬುರಾವ್ ಮಂಗಾನೆಯವರು, ಪ್ರಾ.ಸಾ.5ರ ಸಾಕ್ಷ್ಯವು ಪರಮ ಸತ್ಯವಲ್ಲ ಹಾಗೂ ಇದನ್ನು ಯಾವುದೇ ಇತರ ಸಾಕ್ಷ್ಯದಂತೆಯೇ ನಿರ್ಧರಿಸಬೇಕಾಗುತ್ತದೆಯೆಂದು ಭಾವಾವೇಶಪೂರಿತವಾಗಿ ವಾದಿಸಿದ್ದಾರೆ. ***ಮಯೂರ್ ಪಿ. ಷಾ -ವಿರುದ್ಧ- ಗುಜರಾತ್ ರಾಜ್ಯ*** [4], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ವೈದ್ಯರ ಸಾಕ್ಷ್ಯವನ್ನು ಯಾವುದೇ ಇತರ ಸಾಕ್ಷ್ಯದ ಹಾಗೆಯೇ ಪರಿಗಣಿಸಬೇಕಾಗುತ್ತದೆ ಹಾಗೂ ವೈದ್ಯರ ಸಾಕ್ಷ್ಯವು ಪರಮ ಸತ್ಯವೆಂಬಷ್ಟಕ್ಕೆ ಯಾವುದೇ ಪೂರ್ವಭಾವನೆಯಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. ತನ್ನ ಪಾಟೀ ಸವಾಲಿನಲ್ಲಿ ಪ್ರಾಸಾ.5 ನಿರ್ದಿಷ್ಟವಾಗಿ, ತನಗೆ ಸಾವಿನ ಕಾರಣ ಗೊತ್ತಿಲ್ಲವೆಂದು ಹಾಗೂ ತಾನು ಯಾವುದೇ ಬಾಹ್ಯ ಅಥವಾ ಆಂತರಿಕ ಗಾಯಗಳನ್ನು ಗಮನಿಸಿಲ್ಲವೆಂದು ಹೇಳಿಕೆ ನೀಡಿದ್ದಾರೆ. ಅವನು, ಎದೆ ಹಾಗೂ ವೃಷಣಗಳ ಮೇಲೆ ಒದ್ದಿರುವ ಹಾಗೂ ಗುದ್ದಿರುವುದರಿಂದ ಆಂತರಿಕ ಗಾಯಗಳಾಗಿರಬಹುದೆಂದು ಸಹ ಹೇಳಿಕೆ ನೀಡಿದ್ದಾರೆ. 4-5 ಜನರು ಎದೆ ಅಥವಾ ವೃಷಣಗಳ ಮೇಲೆ

4. 1982 ಕ್ರಿಮಿನಲ್ ಎಲ್.ಜೆ. 82 (ಎಸ್‌ಸಿ)

ಒದ್ದಿದ್ದರೆ ಅಥವಾ ಗುದ್ದುವ ಮೂಲಕ ಹೊಡೆದಿದ್ದರೆ, ಆಂತರಿಕ ಗಾಯಗಳಾಗುವ ಸಾಧ್ಯತೆಯಿರುತ್ತದೆಯೆಂದು ನಿರ್ದಿಷ್ಟವಾಗಿ ಹೇಳಿಕೆ ನೀಡಿದ್ದಾರೆ. ಈ ಸಂಬಂಧದಲ್ಲಿ, ಮುಖ್ಯ ಸಾಕ್ಷಿದಾರರ ಮೌಖಿಕ ಸಾಕ್ಷ್ಯವನ್ನು ನೋಡಬೇಕಾಗುತ್ತದೆ.

17. 1ನೇ ಆಪಾದಿತನು ಜಾವೆದ್‌ನ ಕೆನ್ನೆಗೆ ಹೊಡೆದನೆಂದು ಹಾಗೂ 2ನೇ ಆಪಾದಿತನು ಹೊಟ್ಟೆಯ ಮೇಲೆ ಹೊಡೆದನೆಂದು ಹಾಗೂ ಅವನಿಗೆ ಅಲ್ಲಿಯೇ ಇದ್ದು ಹೊಡೆದಿರುವ 3 ಜನ ಅಜ್ಞಾತ ವ್ಯಕ್ತಿಗಳು ಹಾಗೂ ಅವರೆಲ್ಲರೂ ತಮ್ಮ ಕಾಲುಗಳಿಂದ ಒದ್ದು, ತಮ್ಮ ಕೈಗಳಿಂದ ಥಳಿಸಿದರೆಂದು ಶಬೀರ್ ಅಹ್ಮದ್ ಹೇಳಿಕೆ ನೀಡಿದ್ದಾನೆ. ಅಲ್ಲದೆ, ಈ ಕಾರಣದಿಂದ ಜಾವೆದ್ ಕೆಳಗೆ ಬಿದ್ದನೆಂದು ಹಾಗೂ ಅವರು ಮತ್ತೆ ಅವನ ಗುಪ್ತಾಂಗಗಳ ಮೇಲೆ ಒದ್ದರೆಂದು ಹಾಗೂ 4–5 ನಿಮಿಷಗಳೊಳಗೆ ಮರಣ ಹೊಂದಿದನೆಂದು ಅವನು ಹೇಳಿಕೆ ನೀಡಿದ್ದಾನೆ. ತನ್ನ ಪಾಟೀ ಸವಾಲಿನಲ್ಲಿ ಅವನು, ತನ್ನ ಮಗನಿಗೆ ಆಂತರಿಕ ಗಾಯಗಳಾದವೆಂದು ಹಾಗೂ ಅವನ ಗುಪ್ತಾಂಗಗಳು ಎಂದರೆ ವೃಷಣಗಳು ಹಾಗೂ ಎದೆಯ ಮೇಲೆ ಮೂಗೇಟು ಕಂಡು ಬಂದಿದ್ದವೆಂದು ಹೇಳಿಕೆ ನೀಡಿದ್ದಾನೆ. ಅನುಕ್ರಮವಾಗಿ ನಿಶಾನೆ ಪಿ.1 ಹಾಗೂ ಪಿ.12 ಎಂದು ಗುರುತು ಮಾಡಲಾದ ಮಹಜರು ಪಂಚನಾಮ ಅಥವಾ ಮರಣೋತ್ತರ ಶವಪರೀಕ್ಷೆ ಯಾವ ಮಾಹಿತಿಯನ್ನು ಒದಗಿಸಿರುವುದಿಲ್ಲ. ನಿಶಾನೆ ಪಿ.12ರಲ್ಲಿ, ಕುತ್ತಿಗೆಯ ಮೇಲೆ ಯಾವುದೇ ಕತ್ತು ಹಿಸುಕಿದ ಅಥವಾ ಗೆರೆಗಳ ಗುರುತುಗಳ ಸಾಕ್ಷ್ಯವಿರಲಿಲ್ಲವೆಂದು ಹಾಗೂ ಹೊಟ್ಟೆ ಎದೆ ಅಂಗಗಳ ಮೇಲೆ ಹಾಗೂ ಕೆಳಗೆ ಯಾವುದೇ ಬಾಹ್ಯ ಗಾಯಗಳಿಲ್ಲವೆಂದು ಸೂಚಿಸಲಾಗಿದೆ. ಎಲ್ಲಾ ನಾಲ್ಕು ಅಂಗಗಳಲ್ಲಿ ಹೆಣದ ಸೆಡೆತ ಕಂಡುಬಂದಿಲ್ಲ ಹಾಗೂ ಬಾಹ್ಯ ಜನನಾಂಗಗಳಿಗೆ ಯಾವುದೇ ಹಾನಿಯಾಗಿರುವುದಿಲ್ಲ. ತಲೆ ಬುರುಡೆಗೆ ಹಾನಿಯಾಗಿರಲಿಲ್ಲ. ಹಾಗೂ ಎದೆ ಬಗ್ಗರಿಗೂ ಸಹ ಹಾನಿಯಾಗಿಲ್ಲ. ನಿಶಾನೆ. ಪಿ12ರ ಪ್ರಕಾರ ಹೊಟ್ಟೆಗೂ ಸಹ ಯಾವುದೇ ಹಾನಿಯಾಗಿಲ್ಲ ಹಾಗೂ ಮೂತ್ರಾಂಗಗಳಿಗೂ ಹಾನಿಯಾಗದೆ ಆರೋಗ್ಯಕರವಾಗಿವೆ. ನಿಶಾನೆ ಪಿ.12ರಲ್ಲಿ ನೀಡಲಾದ ಅಭಿಪ್ರಾಯ ಈ ಮುಂದಿನಂತಿದೆ:

ಪೆಟ್ಟುಗಳಾದ ಕಾರಣದಿಂದ ನರಗಳಿಗೆ ಆಘಾತವಾದ ಕಾರಣ ಹೃದಯರಕ್ತನಾಳಗಳು ವಿಫಲವಾಗಿರುವುದು ಸಾವು ಸಂಭವಿಸಲು ಕಾರಣವಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಸಹಿ/–

ವೈದ್ಯಕೀಯ ಅಧಿಕಾರಿ.

'13.1.2009ರಂದು ಸ್ವೀಕರಿಸಲಾಗಿದೆ.'

ಸಹಿ/–

ಪೊಲೀಸು ಉಪ ನಿರೀಕ್ಷಕರು, ಶಹಬಾದ್.

18. ಸಾಜಿದ್‌ನನ್ನು ಪ್ರಾ.ಸಾ.7 ಎಂದು ವಿಚಾರಣೆ ಮಾಡಲಾಗಿದೆ. ಎಲ್ಲಾ ಆಪಾದಿತರು ತನ್ನ ಸಹೋದರನನ್ನು ಥಳಿಸಲು ಪ್ರಾರಂಭಿಸಿದರೆಂದು ಹಾಗೂ 1ನೇ ಆರೋಪಿಯು ಕೆನ್ನೆಯ ಮೇಲೆ ಹೊಡೆದನೆಂದು ಹಾಗೂ 2ನೇ ಆಪಾದಿತನು ಹೊಟ್ಟೆಯ ಮೇಲೆ ಹಾಗೂ ಬೆನ್ನಿನ ಮೇಲೆ ಗುದ್ದಿದನೆಂದು ಹಾಗೂ ಉಳಿದ ಆಪಾದಿತರು ಮುಷ್ಠಿಯಿಂದ ತನ್ನ ಸಹೋದರನನ್ನು ಗುದ್ದಿದರು ಹಾಗೂ ಅವನ ಗುಪ್ತಾಂಗ ಹಾಗೂ ಹೊಟ್ಟೆಯ ಮೇಲೆ ಅವರ ಕಾಲುಗಳಿಂದ ಒದ್ದರೆಂದು ಹೇಳಿಕೆ ನೀಡಿದ್ದಾನೆ. ಇದು ಮುಖ್ಯ ವಿಚಾರಣೆಯಲ್ಲೂ ಕಂಡು ಬರುತ್ತದೆ. ಜಾವೆದ್‌ನು, ಏನು ನಡೆಯುತ್ತಿದೆಯೆಂದು ನೋಡಲು ತನ್ನ ಮನೆಯಿಂದ ಹೊರಗೆ ಬಂದಾಗ 2ನೇ ಆರೋಪಿ ಹಾಗೂ ದೇವೀಂದ್ರಪ್ಪ ಎಂಬ ಒಬ್ಬ ವ್ಯಕ್ತಿ ತನ್ನ ಮುಷ್ಠಿಯಿಂದ ಅವನನ್ನು ಗುದ್ದುತ್ತಿದ್ದನೆಂದು ಹಾಗೂ ಅವನ ಗುಪ್ತಾಂಗಕ್ಕೆ ಒದ್ದನೆಂದು ಹಾಗೂ 4–5 ನಿಮಿಷಗಳ ಕಾಲ ಅವನನ್ನು ಥಳಿಸಿದನೆಂದು ಅವನು ಸ್ಥಳದಲ್ಲೇ ಮೃತನಾದನೆಂದು ಪ್ರಾ.ಸಾ.11 ಮಹ್ಮದ್ ಯೂಸೂಫ್‌ನು ಸಹ ಹೇಳಿಕೆ ನೀಡಿದ್ದಾನೆ.

19. ಹಜೀರಾ ಬೇಗಂ (ಪ್ರಾ.ಸಾ.12) ಇವಳು ಕಿಟಕಿಯ ಮೂಲಕ ನೋಡಿ ಘಟನೆಗೆ ಸಾಕ್ಷಿಯಾಗಿದ್ದಾಳೆ ಹಾಗೂ ಎಲ್ಲಾ ಆರೋಪಿಗಳು ತನ್ನ ಮಗನ ಹೊಟ್ಟೆಯ ಮೇಲೆ ಹೊಡೆದರೆಂದು ಹಾಗೂ ಗುಪ್ತಾಂಗದ ಮೇಲೆ ಒದ್ದರೆಂದು ಇದರ ಪರಿಣಾಮವಾಗಿ ಅವನು ಕೆಳಕ್ಕೆ ಬಿದ್ದು ಸ್ಥಳದಲ್ಲೇ ಮೃತನಾದನೆಂದು ಪ್ರಕಟಪಡಿಸಿದ್ದಾಳೆ. ಪ್ರಾಸಾ.5 ಡಾ॥ ಪರಮೇಶ್ವರ ನಿಶಾನೆ ಪಿ.12ರಲ್ಲಿ ಸೂಚಿಸಲಾಗಿರುವ ಪೆಟ್ಟಿನ ಬಗ್ಗೆ ಏನನ್ನೂ ಮಾತಾಡಿಲ್ಲ. ಡಾ॥ ಸುಬ್ರಹ್ಮಣ್ಯಂರವರು ಬರೆದ ಹಾಗೂ ಕಾನೂನು ಪ್ರಕಾಶಕರು (ಭಾರತ) ಪ್ರೈವೇಟ್ ಲಿಮಿಟೆಡ್ ಇವರು ಪ್ರಕಟಿಸಿದ **ವೈದ್ಯಕೀಯ ನ್ಯಾಯತತ್ವ ಹಾಗೂ ವಿಷಶಾಸ್ತ್ರ** ಪುಸ್ತಕವನ್ನು ನೋಡುವುದು ಉತ್ತಮವಾಗಿರುತ್ತದೆ. ಸದರಿ ಪುಸ್ತಕದ 182ನೇ ಪುಟದಲ್ಲಿ, ಪೆಟ್ಟುಗಳಿಗೆ ಸಂಬಂಧಿಸಿದ ಸಂಗತಿ ಅಧ್ಯಾಯ–XIIರಲ್ಲಿ ಕಂಡುಬರುತ್ತದೆ. ಪೆಟ್ಟಿನ ವಿಧಗಳು ಯಾವುವು ಹಾಗೂ ಗೊಂದಲಗಳು ಏನು ಎಂಬುದನ್ನು, ಇದರಲ್ಲಿ ಚರ್ಚಿಸಲಾಗಿದೆಯಲ್ಲದೆ ''ಪೆಟ್ಟು'' ಎಂಬ ಪದವನ್ನು ಪರಿಭಾಷಿಸಲಾಗಿದೆ.

> ''**ಪರಿಭಾಷೆ**: ಹೊರಗಿನ ಒಡೆತದಿಂದ ಒಂದು ರೀತಿಯಿಂದ ಹೊಡೆತ ಬಿದ್ದು ದೇಹಕ್ಕೆ ಗಾಯವಾಗಿರುವುದು.
>
> **ವಿಧಗಳು**: ಇದನ್ನು ನಾಲ್ಕು ವಿಧಗಳಾಗಿ ವರ್ಗೀಕರಿಸಲಾಗಿದೆ:
>
> 1. ದೈಹಿಕ ಪೆಟ್ಟು: ದೈಹಿಕ ಹಿಂಸೆಯಿಂದ ಆಗಿರುವುದು.
>
> 2. ಶಾಖಧಾರಕ ಪೆಟ್ಟು: ಬಿಸಿ ಅಥವಾ ತಣ್ಣನೆಯ ಕಾರಣದಿಂದ ಆಗಿರುವುದು.
>
> 3. ವಿದ್ಯುಚ್ಛಕ್ತಿ ಪೆಟ್ಟು: ವಿದ್ಯುಚ್ಛಕ್ತಿ ಮೂಲಕ ಆಗಿರುವುದು.

4. ರಾಸಾಯನಿಕ ಪೆಟ್ಟು: ವಿಷಯುಕ್ತ ಪದಾರ್ಥಗಳಿಂದ ಆಗಿರುವುದು.

20. ಒಪ್ಪಿಕೊಂಡ ಹಾಗೆ ಡಾ॥ ಸುಬ್ರಹ್ಮಣ್ಯಂರವರು ತಮ್ಮ ವಿವರಣೆಯಲ್ಲಿ ಪರಿಭಾಷಿಸಲಾದಂತೆ ಪೆಟ್ಟಿನ ಕಾರಣದಿಂದ ನರಮಂಡಲ ಆಘಾತಗೊಂಡುದರ ಸಲುವಾಗಿ ಆಂತರಿಕ ಗಾಯಗಳು ಕಂಡುಬಂದಿರುವುದಿಲ್ಲ. ಈ ಸಂಬಂಧದಲ್ಲಿ ಶ್ರೀ ಬಾಬುರಾವ್ ಮಂಗಾನೆಯವರು ಆಧರಿಸಿದ ***ಮೋಹನ್‌ಲಾಲ್*** (ಮೇಲಿನ) ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ನಿರ್ಣಯವು ಪ್ರಸ್ತುತವಾಗಿರುತ್ತದೆ. ಸದರಿ ಪ್ರಕರಣದ ಸಂಗತಿಗಳ ಪ್ರಕಾರ, ಪ್ರಾ.ಸಾ.1 ಹಾಗೂ ಪ್ರಾ.ಸಾ.7 (ಶಂಭು ಹಾಗೂ ಲಾಲು) ಸಹೋದರರಾಗಿದ್ದಾರೆ ಹಾಗೂ ರಾಜಸ್ತಾನದಲ್ಲಿನ ಗ್ರಾಮದ ನಿವಾಸಿಗಳಾಗಿದ್ದಾರೆ. ದಿನಾಂಕ 23.01.2000ದ ರಾತ್ರಿ ಅರ್ಜುನ್ ಷಾ ಎಂಬೊಬ್ಬರ ಮನೆಯಿಂದ ಅವರು ಹಿಂದಕ್ಕೆ ಹೋಗುತ್ತಿರುವಾಗ ಆರೋಪಿ ಎಂದರೆ ಮೋಹನ್‌ಲಾಲ್ ಅವರನ್ನು ಲಾಠಿಗಳು ಹಾಗೂ ಧರಿಯಾಗಳೊಂದಿಗೆ ಆಕ್ರಮಣ ಮಾಡಿದ್ದರು. ಪ್ರಾ.ಸಾ.7 ಆರೋಪಿಗಳಿಂದ ಹೇಗೋ ತಪ್ಪಿಸಿಕೊಂಡು ಪೊಲೀಸು ಠಾಣೆಗೆ ಹೋಗಿ ಸುಮಾರು ರಾತ್ರಿ 11.30ರಲ್ಲಿ ವರದಿಯನ್ನು ದಾಖಲಿಸಿದ್ದಾರೆ. ಇದರ ಆಧಾರದ ಮೇಲೆ ಭಾರತ ದಂಡ ಸಂಹಿತೆಯ 147, 148, 149, 307, 323, 347ರ ಅಡಿಯಲ್ಲಿ ದಂಡಿಸಬಹುದಾದ ಅಪರಾಧಗಳಿಗಾಗಿ ಪ್ರಕರಣವನ್ನು ದಾಖಲಿಸಲಾಗಿತ್ತು ಹಾಗೂ ಗಾಯಾಳುವನ್ನು ಪ್ರತಾಪ್‌ಕರ್ ಆಸ್ಪತ್ರೆಗೆ ಕೂಡಲೇ ದಾಖಲಿಸಲಾಗಿತ್ತು. ಇಲ್ಲಿ ಗಾಯಗಳಿಗೆ ಬಲಿಯಾಗಿ ಸತ್ತುಹೋದ. ತನಿಖೆಯ ನಿರ್ಣಯದಲ್ಲಿ 302ನೇ ಪ್ರಕರಣದ ಅಪರಾಧವನ್ನು ಸೇರಿಸಲಾಗಿತ್ತು. ಅಧಿವಿಚಾರಣೆಯು ಪೂರ್ಣಗೊಂಡ ನಂತರ, ಅವರನ್ನು ಭಾರತ ದಂಡ ಸಂಹಿತೆ 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಆಜೀವ ಕಾರಾವಾಸ ಶಿಕ್ಷೆಗೆ ಒಳಪಡಿಸಲಾಗಿತ್ತು ಹಾಗೂ ಇತರ ಅಪರಾಧಗಳಿಗಾಗಿ 1 ರಿಂದ 3 ವರ್ಷಗಳವರೆಗಿನ ಕಾರಾವಾಸ ಶಿಕ್ಷೆಗೆ ವ್ಯಾಪಿಸಲಾಗಿತ್ತು ಹಾಗೂ ದಂಡವನ್ನು ಸಂದಾಯ ಮಾಡಲು ಸಹ ತಿಳಿಸಲಾಗಿತ್ತು. ರಾಜಸ್ಥಾನದ ಉಚ್ಚ ನ್ಯಾಯಾಲಯದ ಮುಂದೆ ಕ್ರಿಮಿನಲ್ ಅಪೀಲು 509/11ರಲ್ಲಿ ಸಲ್ಲಿಸಲಾದ ಅಪೀಲಿನಲ್ಲಿ, ಅಪೀಲುದಾರರನ್ನು ಭಾರತ

ದಂಡ ಸಂಹಿತೆ 149ನೇ ಪ್ರಕರಣದೊಂದಿಗೆ ಓದಲಾದ 302ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧವನ್ನು ಖುಲಾಸೆ ಮಾಡಲಾಗಿತ್ತು ಹಾಗೂ ಈಗಾಗಲೇ ಅವರು ಒಳಗಾಗಿದ್ದ ಶಿಕ್ಷೆಯನ್ನು ಇತರ ಅಪರಾಧಗಳ ಸಂಬಂಧದಲ್ಲಿನ ಶಿಕ್ಷೆಯೆಂದು ನೀಡಲಾಗಿತ್ತು. ಸದರಿ ತೀರ್ಪಿನ ವಿರುದ್ಧ ರಾಜ್ಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಅಪೀಲು ಹೋಗಿತ್ತು.

21. ಸದರಿ ಪ್ರಕರಣದಲ್ಲಿ, ಪ್ರಾಸಾ.13 ಎಂದು ಪರಿಶೀಲಿಸಲಾದ ವೈದ್ಯರು, ಅಪೀಲುದಾರರಿಗೆ ಆಗಿರುವ ಗಾಯಗಳು ಶರೀರದ ಮರ್ಮಾಂಗವಲ್ಲದ ಸ್ಥಳದಲ್ಲಿ ಹೊಡೆದಿರುವುದು ಸ್ವರೂಪದಲ್ಲಿ ಸರಳವಾಗಿದೆ ಹಾಗೂ ತಲೆಬುರುಡೆಯಲ್ಲಿ ಬಾಹ್ಯ ಗಾಯಗಳು ಕಂಡು ಬಂದಿಲ್ಲ. ಆದ್ದರಿಂದ ಆಪಾದಿತನ ವಿರುದ್ಧ ಹೊರಿಸಲಾದ ಆರೋಪವನ್ನು ಬೆಂಬಲಿಸಲು ಇತರ ಯಾವುದೇ ಸಾಕ್ಷ್ಯಗಳಿಲ್ಲದಿರುವುದರಿಂದ, ಆಪಾದಿತನು ಮೃತರನ್ನು ಸಾಯಿಸುವ ಉದ್ದೇಶವನ್ನು ಹೊಂದಿಲ್ಲದಿದ್ದುದರಿಂದ ಅಥವಾ ಶರೀರದ ಯಾವುದೇ ಏಟಿನ ಗಾಯ ಸಾವಿಗೆ ಕಾರಣವಾಗಿರುವ ಸಂಭವವಿಲ್ಲದ್ದರಿಂದ ಅವರು ಕೊಲೆಯ ಅಪರಾಧದ ತಪ್ಪಿತಸ್ಥರಾಗುವುದಿಲ್ಲವೆಂದು ಇದರಲ್ಲಿ ಅಭಿಪ್ರಾಯಪಟ್ಟಿತ್ತು. ಮರಣೋತ್ತರ ಶವಪರೀಕ್ಷೆಯನ್ನು ನಡೆಸಿರುವ ವೈದ್ಯರು ಸಹ ಸಾಮಾನ್ಯ ಕ್ರಮದಲ್ಲಿ ಸಾವಿಗೆ ಕಾರಣವಾಗುವಷ್ಟು ಗಾಯಗಳು ಸಾಕಷ್ಟಿವೆಯೆಂದು ಪ್ರಾಮಾಣೀಕರಿಸಿರುವುದಿಲ್ಲ. ಅಂಥ ಸಾಕ್ಷ್ಯದ ಬೆಳಕಿನಲ್ಲಿ, ಅಪೀಲುಗಳನ್ನು ಪುರಸ್ಕರಿಸುವಲ್ಲಿ ಹಾಗೂ ಕೊಲೆಯ ಆರೋಪದ ಅಪರಾಧಿಗಳನ್ನು ಖುಲಾಸೆಗೊಳಿಸಿ ಹಾಗೂ ಅವರಿಗೆ ಆರೋಪಿಸಲಾಗಿರುವ ಉಳಿದ ಅಪರಾಧಗಳ ಸಂಬಂಧದಲ್ಲಿ ಅಪರಾಧ ನಿರ್ಣಯವನ್ನು ಹೊರಿಸಿ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಮ ನ್ಯಾಯಸಮ್ಮತವೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

22. ಪ್ರಸ್ತುತ ಪ್ರಕರಣದಲ್ಲಿ, ಆಂತರಿಕ ಗಾಯಗಳು ಕಂಡುಬಂದಿಲ್ಲ ಅಥವಾ ಬಾಹ್ಯ ಗಾಯಗಳು ಕಂಡು ಬಂದಿರುವುದಿಲ್ಲ. ಜಾವೆದ್ ಅಹ್ಮದ್‌ನ ಮೇಲೆ ಆರೋಪಿಗಳು ಮಾಡಿದ ಆಪಾದಿತವಾಗಿ ಥಳಿಸಿದ ಸ್ವರೂಪದ ಸಂಬಂಧದಲ್ಲಿ

ಸುಸಂಗತತೆಗಳು ಇದ್ದರೂ ಕೂಡ ವೈದ್ಯರ ಆವೃತ್ತಿಯು ಯಾವುದೇ ರೀತಿಯಲ್ಲಿ ಅವರನ್ನು ಸಮರ್ಥಿಸಿಲ್ಲ. ಡಾ॥ ಸುಬ್ರಹ್ಮಣ್ಯಂರವರು ದೈಹಿಕ ಪೆಟ್ಟಿನ ವಿವರಣೆಯಲ್ಲಿ ಉಲ್ಲೇಖಿಸಲಾದ ರೀತಿಯಲ್ಲಿ, ಖಚಿತವಾಗಿ ಸಾವಿಗೆ ಕಾರಣವಾದ ನರಗಳಿಗೆ ಸಂಬಂಧಿಸಿದ ಆಘಾತ ಅಥವಾ ಪೆಟ್ಟು ಯಾವುದು ಎಂಬುದನ್ನು ಸಮರ್ಥಿಸಲು ಶಕ್ತರಾಗಿರುವುದಿಲ್ಲ.

23. ವಾಸ್ತವವಾಗಿ, 737ನೇ ಪುಟದಲ್ಲಿ, ಅಶೋಕ ಲಾ ಹೌಸ್ ಸಂಚಿಕೆ-Iರಲ್ಲಿ ಪ್ರಕಟಿಸಲಾದ ***ಡಾ॥ ಬಕ್ಷಿಯವರ ಲಾ ಲೆಕ್ಸಿಕನ್,*** ದಂಡನೀಯವಾದ ನರಹತ್ಯೆ ಸಂಗತಿಯನ್ನು ದೀರ್ಘವಾಗಿ ಚರ್ಚಿಸಲಾಗಿದೆ. ಭಾರತ ದಂಡ ಸಂಹಿತೆಯ 299ನೇ ಪ್ರಕರಣದ (ಬಿ) ಖಂಡವು 300ನೇ ಪ್ರಕರಣದ (2) ಹಾಗೂ (3)ನೇ ಖಂಡಗಳೊಂದಿಗೆ ಅನುರೂಪವಾಗಿರುತ್ತದೆ. ನಿರ್ದಿಷ್ಟ ಗಾಯಾಳುವಿನ ಸಾವಿಗೆ ಕಾರಣವಾಗಿರುವಂಥ ಗಾಯವನ್ನು ತಿಳಿದುಕೊಂಡು ಮಾಡಲಾದ ಶಾರೀರಿಕವಾಗಿ ಗಾಯಗೊಳಿಸುವ ಉದ್ದೇಶ ಮಾತ್ರ (2)ನೇ ಖಂಡದ ವ್ಯಾಪ್ತಿಯೊಳಗೆ ಕೊಲ್ಲುವುದಕ್ಕೆ ದಾರಿ ಮಾಡಿಕೊಡುವ ಕಾರಣವಷ್ಟೇ ಸಾಕಾಗುತ್ತದೆ. ಭಾರತೀಯ ದಂಡ ಸಂಹಿತೆಯ 299ನೇ ಪ್ರಕರಣದ (2)ನೇ ಖಂಡ ಹಾಗೂ 300ನೇ ಪ್ರಕರಣದ 4ನೇ ಖಂಡಗಳೆರಡೂ ಸಾವಿಗೆ ಕಾರಣವಾಗುವ ಕೃತ್ಯದ ಸಾಧ್ಯತೆಯ ತಿಳಿವಳಿಕೆಗೆ ಸಂಬಂಧಪಡುತ್ತವೆ. (***ಚೆಂಕು -ವಿರುದ್ಧ- ಕೇರಳ ರಾಜ್ಯ***[5]) ವರದಿಯಾದ ನಿರ್ಣಯದ ಆಧಾರದ ಮೇಲೆ ಈ ಅಭಿಪ್ರಾಯವನ್ನು ನೀಡಲಾಗಿದೆ. ಸಾಮಾನ್ಯ ಕ್ರಮದಲ್ಲಿ ಸ್ವಾಭಾವಿಕವಾಗಿ ಸಾವುಂಟಾಗಲು ದೈಹಿಕ ಗಾಯ ಎಷ್ಟಿರಬೇಕು ಎಂಬುದು ನೈಸರ್ಗಿಕವಾಗಿ ಆದ ಗಾಯದಿಂದಾದ ಹೆಚ್ಚಿನ ಸಾಧ್ಯತೆ ಎಂಬ ಅರ್ಥವನ್ನು ಕೊಡುತ್ತದೆ. ಭಾರತ ದಂಡ ಸಂಹಿತೆಯ 300ನೇ ಪ್ರಕರಣದ (3)ನೇ ಖಂಡದೊಳಗೆ ಬರುವ ಪ್ರಕರಣಕ್ಕೆ ಸಾಮಾನ್ಯ ನೈಸರ್ಗಿಕ ಕ್ರಮದಲ್ಲಿ ಸಾವಿಗೆ ಕಾರಣವಾಗುವ ಸಾಕಷ್ಟು ದೈಹಿಕವಾದ ಉದ್ದೇಶಪೂರ್ವಕವಾಗಿ ಮಾಡಲಾದ ಗಾಯದಿಂದ ಸಾವುಂಟಾಗಿದೆಯೆಂದು ಸಾವನ್ನು ಮನದಟ್ಟು ಮಾಡಿಕೊಳ್ಳುವ ತನಕವೂ ಅಪರಾಧ ಮಾಡಿದವರು, ಸಾಯಿಸುವ

5. ಎಐಆರ್ 2004 ಎಸ್‌ಸಿಡಬ್ಲ್ಯು 1244

ಉದ್ದೇಶವನ್ನು ಹೊಂದಿದ್ದರೆಂಬುದು ಅನಗತ್ಯವಾದುದು. ಈ ಅಂಶಗಳು ಇಲ್ಲದ ಹೊರತು ಇದು ಕೊಲೆಗೆ ಕಾರಣವಾಗದೆ, ದಂಡನೀಯವಾದ ನರಹತ್ಯೆಯಾಗುತ್ತದೆ.

24. ಇದಕ್ಕೆ ವಿರುದ್ಧವಾಗಿ, ಮಾನ್ಯ ಎಚ್‌ಸಿಜಿಪಿಯವರು ***ಸಂಜೀವ್*** (ಮೇಲಿನ) ಪ್ರಕರಣದಲ್ಲಿನ ನಿರ್ಣಯವನ್ನು ಅವಲಂಬಿಸಿದ್ದಾರೆ. ಸದರಿ ಪ್ರಕರಣದ ಸಂಗತಿಗಳ ಪ್ರಕಾರ, ವೈದ್ಯರೊಬ್ಬರು, ಅವಳ ಸಹೋದ್ಯೋಗಿಯ ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಿದ್ದರು. ಅವಳು 7 ಗಾಯಗಳಷ್ಟನ್ನು ಗಮನಿಸಿದ್ದಳು. ಅವಳ ಅಭಿಪ್ರಾಯವು ತೀರ್ಪಿನ 5ನೇ ಕಂಡಿಕೆಯಲ್ಲಿ ಕಂಡು ಬರುತ್ತದೆ. ವಾಸ್ತವವಾಗಿ, ಸದರಿ ಪ್ರಕರಣದಲ್ಲಿನ ಮೃತದೇಹವು, ರಕ್ತದ ಮಡುವಿನಲ್ಲಿ ಕಂಡು ಬಂದಿತ್ತು. ಅದು ಗಾಯದ ಸ್ವರೂಪವನ್ನು ಹಾಗೂ ಉದ್ದೇಶವನ್ನು ಹಾಗೂ ಬಳಸಲಾದ ಆಯುಧವನ್ನು ಸಹ ಸೂಚಿಸುತ್ತಿತ್ತು. ಇದು ಪ್ರಸ್ತುತ ಪ್ರಕರಣದ ಸಂಗತಿಗಳನ್ನು ಸ್ಪಷ್ಟವಾಗಿ ಎದುರುಬದುರಾಗಿ ಪ್ರತ್ಯೇಕಿಸುತ್ತದೆ.

25. ***ಮೋಹನ್ ಸಿಂಗ್*** ಪ್ರಕರಣದಲ್ಲಿ ನೀಡಲಾದ ನಿರ್ಣಯದ ಮಟ್ಟಿಗೆ, ಸರ್ವೋಚ್ಚ ನ್ಯಾಯಾಲಯವು, ಪ್ರತ್ಯಕ್ಷ ಸಾಕ್ಷಿಯು ಯಾವಾಗಲೂ ವೈದ್ಯಕೀಯ ಸಾಕ್ಷ್ಯಕ್ಕಿಂತ ಹೆಚ್ಚು ಪ್ರಾಧಾನ್ಯತೆಯುಳ್ಳದ್ದಾಗಿರುತ್ತದೆಯೆಂದು ಅಭಿಪ್ರಾಯಪಟ್ಟಿದೆ. ಸಂಶಯದ ಪ್ರಯೋಜನವನ್ನು ಪಡೆದುಕೊಳ್ಳುವ ಸಲುವಾಗಿ ಕಾಳಿನಿಂದ ಹೊಟ್ಟನ್ನು ತೆಗೆಯುವುದನ್ನು ನ್ಯಾಯಾಲಯವು ನಿರೀಕ್ಷಿಸುತ್ತದೆಯೆಂಬ ಮಾತು ಸತ್ಯವಾದುದು. ಪ್ರಸ್ತುತ ಪ್ರಕರಣದಲ್ಲಿ, ಅರೋಪಿಗಳು ಜಾವೆದ್ ಅಹ್ಮದ್ ಮೇಲೆ ಥಳಿಸಿದ ಸ್ವರೂಪದ ಸಂಬಂಧದಲ್ಲಿ ಸುಸಂಗತತೆ ಇದ್ದರೂ ಕೂಡ, ಇದು, ಡಾ॥ ಪರಮೇಶ್ವರರ ಮೌಖಿಕ ಸಾಕ್ಷ್ಯದ ಅಥವಾ ಮರಣೋತ್ತರ ಶವಪರೀಕ್ಷೆ ವರದಿಯ ರೀತಿಯನ್ನು ಇದು ಪುಷ್ಠೀಕರಿಸಿಲ್ಲ.

26. ದಾಖಲೆಯಲ್ಲಿರುವ ಸಂಪೂರ್ಣ ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯದ ಮರು ನಿರ್ಧರಣೆಯಾದ ಮೇಲೆ, ಜಾವೆದ್ ಅಹ್ಮದ್‌ನನ್ನು ಆಪಾದಿತವಾಗಿ ಥಳಿಸಿರುವುದರಿಂದ ಅವನಿಗೆ ಯಾವುದೇ ಬಾಹ್ಯ ಅಥವಾ ಆಂತರಿಕ

ಗಾಯಗಳಾಗಿರುವುದಿಲ್ಲ ಹಾಗೂ ನರಗಳಿಗೆ ಆದ ಆಘಾತ ಅಥವಾ ದೇಹಕ್ಕೆ ಆದ ಏಟನ್ನು ಆಧರಿಸಿದೆಯೆಂದು ಪರಿಗಣಿಸಲು ಸಾಧ್ಯವಿಲ್ಲವೆಂದು ನಂಬಲು ಇದಿಷ್ಟು ಸಾಕಾಗುತ್ತದೆ. ಡಾ॥ ಸುಬ್ರಹ್ಮಣ್ಯಂರವರ ವಿವರಣೆಯ ಪ್ರಕಾರ ಆದ ಗಾಯಗಳನ್ನು ಪೆಟ್ಟು ಅಗತ್ಯವಾಗಿ ಆಧರಿಸಿರಬೇಕು. ಆದ್ದರಿಂದ ಪರಿಶೀಲನಾಂಶ(2)ಕ್ಕೆ ನಕಾರಾತ್ಮಕವೆಂದು ಉತ್ತರಿಸಲಾಗಿದೆ.

27. **ಪರಿಶೀಲನಾಂಶ ಸಂ.3 ಹಾಗೂ (4)**: ಮಾನ್ಯ ನ್ಯಾಯಾಧೀಶರು ಭಾರತ ದಂಡ ಸಂಹಿತೆಯ 304–I ಪ್ರಕರಣದ ಮೇರೆಗೆ ಆಪಾದಿತರ ಅಪರಾಧ ನಿರ್ಣಯ ಮಾಡುವುದನ್ನು ಸಮರ್ಥಿಸಿಲ್ಲ. ಮತ್ತೊಂದು ಕಡೆ, ಅವರು ಭಾರತ ದಂಡ ಸಂಹಿತೆಯ 324, 341, 504 ಹಾಗೂ 302ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಅವರ ಅಪರಾಧ ನಿರ್ಣಯ ಮಾಡುವುದನ್ನು ಸಮರ್ಥಿಸಿದ್ದಾರೆ. ಆಪಾದಿತನು, ಭಾರತ ದಂಡ ಸಂಹಿತೆಯ 304–I ಪ್ರಕರಣದ ಮೇರೆಗಿನ ಅಪರಾಧದ ಸಂಬಂಧದಲ್ಲಿ ಒಬ್ಬೊಬ್ಬರಿಗೆ 10,000/– ರೂ.ಗಳನ್ನು ಈಗಾಗಲೇ ಸಂದಾಯ ಮಾಡಿದ್ದಾರೆ. ಅದನ್ನು ಭಾರತ ದಂಡ ಸಂಹಿತೆಯ 323ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಅದನ್ನು ಜುಲ್ಮಾನೆಯೆಂದು ಭಾವಿಸಿಕೊಳ್ಳಬಹುದಾಗಿದೆ. ಆಪಾದಿತ ಸಂ.1 ಹಾಗೂ 2 ಇವರು ತನಿಖೆಯ ಅವಧಿಯಲ್ಲಿ 4 ತಿಂಗಳುಗಳಿಗಿಂತ ಹೆಚ್ಚಿನ ಅವಧಿಗೆ ನ್ಯಾಯಿಕ ಅಭಿರಕ್ಷೆಯಲ್ಲಿದ್ದಾರೆ. ಆದ್ದರಿಂದ ಭಾರತ ದಂಡ ಸಂಹಿತೆಯ 323ನೇ ಪ್ರಕರಣದ ಮೇರೆಗಿನ ಅಪರಾಧದ ಅಪರಾಧ ನಿರ್ಣಯವೊಂದಕ್ಕೆ ಮಾತ್ರ ಪ್ರತಿಯೊಬ್ಬರಿಗೆ 1,000ರೂ.ಗಳಿಂದ 11,000/– ರೂ.ಗಳವರೆಗೆ ಜುಲ್ಮಾನೆಯ ಶಿಕ್ಷೆಯನ್ನು ಹೆಚ್ಚಿಸುವ ಮೂಲಕ ಸ್ಥಿರಗೊಳಿಸಬೇಕಾಗಿದೆ ಹಾಗೂ ಅವರು ಈಗಾಗಲೇ ಮೊತ್ತವನ್ನು ಠೇವಣಿಯಾಗಿಡುವುದನ್ನು ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.

28. ಈ ಹಂತದಲ್ಲಿ ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ಶ್ರೀ ಬಾಬುರಾವ್ ಮಂಗಾನೆಯವರು ಭಾರತೀಯ ದಂಡ ಸಂಹಿತೆಯ 323ನೇ ಪ್ರಕರಣದ ಮೇರೆಗಿನ ಅಪರಾಧ ನಿರ್ಣಯವನ್ನು ಹಾಗೂ ಶಿಕ್ಷೆಯ ಸ್ಥಿರೀಕರಣವನ್ನು,

ಅವರು ಕಾರ್ಯ ನಿರ್ವಹಿಸುತ್ತಿದ್ದ ಆಲ್‌ಸ್ಟಮ್ ಲಿಮಿಟೆಡ್, ಸಿಮೆಂಟ್ ತಯಾರಿಕಾ ಕಂಪನಿಯಲ್ಲಿ ಆಪಾದಿತ ಸಂ.1 ಹಾಗೂ 2ನ್ನು ಮುಂದುವರೆಸಲು ಅಡ್ಡಿಯಾಗಬಾರದೆಂದು ವಿನಂತಿಸಿದ್ದಾರೆ. ಸದರಿ ಸಲ್ಲಿಕೆಯನ್ನು ದಾಖಲೆಯಲ್ಲಿ ತೆಗೆದುಕೊಳ್ಳಲಾಗಿದೆ.

29. ಇದರ ಪರಿಣಾಮ ಈ ಮುಂದಿನ ಆದೇಶವನ್ನು ಹೊರಡಿಸಲಾಗಿದೆ.

**ಆದೇಶ**

ಅಪೀಲನ್ನು ಭಾಗಶಃ ಪುರಸ್ಕರಿಸಲಾಗಿದೆ. ಭಾರತ ದಂಡ ಸಂಹಿತೆಯ 304–I ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧದಷ್ಟರಮಟ್ಟಿಗೆ ಅಪರಾಧದ ತೀರ್ಪು ಹಾಗೂ ಶಿಕ್ಷೆಯ ಆದೇಶಕ್ಕೆ ಸಂಬಂಧಪಟ್ಟಿದ್ದು, ಇದನ್ನು ತಳ್ಳಿ ಹಾಕಲಾಗಿದೆ. ಭಾರತ ದಂಡ ಸಂಹಿತೆಯ 323ನೇ ಪ್ರಕರಣದ ಮೇರೆಗೆ ಅಪರಾಧ ನಿರ್ಣಯದ ತೀರ್ಪು ಹಾಗೂ ದಂಡಿಸಬಹುದಾದ ಅಪರಾಧದ ಶಿಕ್ಷೆಯನ್ನು ಪ್ರತಿಯೊಬ್ಬರಿಗೆ 1,000/– ರೂ.ಗಳಿಂದ 11,000/– ರೂ.ಗಳವರೆಗೆ ಜುಲ್ಮಾನೆ ಮೊತ್ತವನ್ನು ಹೆಚ್ಚಿಸುವ ಮೂಲಕ ಸ್ಥಿರೀಕರಿಸಲಾಗಿದೆ ಹಾಗೂ ಆಪಾದಿತರು ಈಗಾಗಲೇ ಜಮೆ ಮಾಡಿದ ಮೊತ್ತವನ್ನು ಜುಲ್ಮಾನೆಯ ಸಂಬಂಧದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಭಾರತ ದಂಡ ಸಂಹಿತೆಯ 323ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕೆ ವಿಧಿಸಲಾದ ಜುಲ್ಮಾನೆಯ ಶಿಕ್ಷೆಯು ಅವರ ಉದ್ಯೋಗದ ಹಾದಿಯಲ್ಲಿ ಅಡ್ಡಿಯಾಗುವುದಿಲ್ಲ.

ಜುಲ್ಮಾನೆಯಾಗಿ ಠೇವಣಿಯಾಗಿಡಲಾದ 33,000/– ರೂ.ಗಳ ಜುಲ್ಮಾನೆ ಮೊತ್ತದ ಪೈಕಿ 25,000/– ರೂ.ಗಳನ್ನು (ಇಪತ್ತೈದು ಸಾವಿರ ರೂ. ಮಾತ್ರ) ಅಧಿವಿಚಾರಣಾ ನ್ಯಾಯಾಲಯವು ಆದೇಶಿಸಲಾದಂತೆ ನಷ್ಟ ಪರಿಹಾರವಾಗಿ ಶಬೀರ್ ಅಹ್ಮದ್ (ಪ್ರಾ.ಸಾ.3) ರವರಿಗೆ ನೀಡಲಾಗಿದೆ. ತದನುಸಾರವಾಗಿ ಅಪೀಲನ್ನು ಮಾರ್ಪಡಿಸಲಾಗಿದೆ.

---